ಶೈಲಜ

ವಿಶೇಷ ಸಿದ್ದ



ಜೈ ವಿದ್ಯಾರ್ಥಿ !

ವಿಶ್ವ-ರಾಷ್ಟ್ರ-ಸಂಸ್ಕೃತಿ
ಸ್ವದೇಶ-ಸ್ವಭಾಷೆ-ಸತ್ ಸಾಹಿತ್ಯ
ಪರಿಜ್ಞಾನಗಳ ವ್ರತದಿಂದೆ-

ಸತ್ಯ-ಶಿಸ್ತು-ಶಕ್ತಿ-ಶಾಂತಿ
ಜ್ಞಾನ-ವಿಜ್ಞಾನ-ಸುಜ್ಞಾನ
ಅಭಿಜ್ಞಾನಗಳ ಪ್ರೇಮದಿಂದೆ-

ವಿಶ್ವಶಾಂತಿಯ-ವಿಶ್ವಪಂಥದಿ
ವಿಶ್ವಪಾತ್ರಿ-ವಿಶ್ವವೀಥಿ ಮೆಟ್ಟಿ
ವಿಶ್ವಜೀವನೀ ಪಾತ್ರವಾಗೆ-

ಅಂತೇವಾಸಿಗಳ ಸರ್ವೋದ್ಧಾರ !
ಸಂಜೀವನಾ ಪರಮಪಾವನಾ
ಜೈ ವಿದ್ಯಾರ್ಥಿ ! ಜೈ ವಿದ್ಯಾಧನ !

ವಿಶೇಷ ಸುದ್ದಿ

ಮಲ್ಲಿಕಾ

ರಾಷ್ಟ್ರ-ರಾಷ್ಟ್ರ ಭಾಷೆ
ರಾಜ್ಯ-ರಾಜ್ಯ ಭಾಷೆ
ನಂಟು-ಬಂಟು ಏಕತ್ರವೈ

VISHESHA SUDDI in Kannada by **"Mallika"** Published by Lakshmi Prakashana, 359, Kalidas Nilaya, 14th Cross, Sadashivnagar, Bangalore - 560 080

೧೯೯೯

ಬೆಲೆ : ಹನ್ನೆರಡು ರೂಪಾಯಿ

ಮುದ್ರಕರು

ನ್ಯೂ ಐಡಿಯಾಸ್

351, 10ನೇ ಬಿ ಮುಖ್ಯ ರಸ್ತೆ

ಜಯನಗರ, ಬೆಂಗಳೂರು-560 011

॥ ಶ್ರೀ ಗಣನಾಥ ಪಾದಾರ್ಪಣಮಸ್ತು ॥

ವಿಶೇಷ ಸುದ್ದಿ

(ಶಿಶು ಸಾಹಿತ್ಯ)

ಸುಲ್ಲಿಕಾ

ಮುದ್ರಕರು ಮತ್ತು ಪ್ರಕಾಶಕರು
ಲಕ್ಷ್ಮೀ ಪ್ರಕಾಶನ
359, ಕಡಿದಾಳ್ ನಿಲಯ,
14 ನೇ ಕ್ರಾಸ್, ಸದಾಶಿವನಗರ,
ಬೆಂಗಳೂರು-25

ನಿವೇದನೆ

ಲಕ್ಷ್ಮೀ ಪ್ರಕಾಶನ ಮಾಲಿಕೆಯಲ್ಲಿ ಮೂವತ್ತನೆಯದಾಗಿ ಅರಳಿದ ಕುಸುಮ "ವಿಶೇಷ ಸುದ್ದಿ" ಮಕ್ಕಳ ಮನೋರಂಜಕವಾದ ಪುಟ್ಟ ಪುಸ್ತಕ. ಮಕ್ಕಳಿಗೆ ಪ್ರಾಣಿ ಪಕ್ಷಿಗಳ ಮೇಲಿರುವ ಆಸಕ್ತಿಯನ್ನು ಗುರಿಯಾಗಿಟ್ಟುಕೊಂಡು ಕೋದ ಪುಟ್ಟ ಪುಟ್ಟ ಕತೆಗಳ ಸುಂದರ ಗುಚ್ಛ ವಿಶೇಷ ಸುದ್ದಿ. ಮಕ್ಕಳ ಪುಸ್ತಕಗಳಲ್ಲಿ ಇದು ಮೂರನೆಯ ಪುಸ್ತಕ. ಇನ್ನು ಮುಂದಿನ ಪ್ರಕಾಶನಕ್ಕೆ ಅಣಿಯಾದ ಹಸ್ತ ಪ್ರತಿಗಳಲ್ಲಿ ಎಂಟು ಕಾದಂಬರಿಗಳು, ಮೂರು ಮಕ್ಕಳ ಪುಸ್ತಕಗಳು, ಒಂದು ಅಖಂಡ ಕಾವ್ಯ ಮೇಜಿನ ಮೇಲಿವೆ. ಇವೆಲ್ಲಾ ಬೆಳಕು ಕಾಣುವುದು ಯಾವ ಕಾಲಕ್ಕೋ. ಇಂದಿನ ಪರಿಸ್ಥಿತಿಯಲ್ಲಿ ಪುಸ್ತಕ ಪ್ರಕಾಶನಕ್ಕೆ ಅದ್ಭುತ ಎದೆಗಾರಿಕೆ ಬೇಕು. ಬೆಲೆಗಳು ಗಗನದಲ್ಲಿ. ಸಾಧನೆ ಸಾಸಿವೆಯ ಪ್ರಮಾಣದಲ್ಲಿ.

ಸರಕಾರ ಕಣ್ಣಿದ್ದೂ ಕುರುಡು. ಈ ದಿಸೆಯಲ್ಲಿ ಏನಾದರೊಂದು ಸರಿಯಾದ ಪರಿಹಾರ ಕಾರ್ಯ ಕೈಗೂಡದಿದ್ದರೆ ಕವಿಗಳ ಲೇಖನಿಯ ಮಸಿ ಆರುವುದು ಖಂಡಿತ.

ಮಲ್ಲಿಕಾ

ರಾಮು-ಭೀಮು

ರಾಮು-ಭೀಮು ಹೋಗುತಿದ್ದುದು ಒಂದೇ ಶಾಲೆಗೆ, ಇಬ್ಬರೂ ಸ್ನೇಹಿತರು.

ರಾಮು ಓದುವುದರಲ್ಲಿ ಮುಂದೆ. ತುಂಬ ಚುರುಕು ಸ್ವಭಾವ. ಭೀಮು ಓದುವುದರಲ್ಲಿ ಹಿಂದೆ. ಅಷ್ಟೇ ಮೊದ್ದು ಸ್ವಭಾವ. ಭೀಮುವಿನ ತಾಯಿಗೆ ಮಗನಿಂದ ಕೊರಗು. ಅವಳು ಆಗಾಗ 'ನೀನೂ ರಾಮುವಿನಂತೆ ಕಷ್ಟಪಟ್ಟು ಓದು. ಹಿಂದೆ ಬೀಳಬಾರದು' ಎಂದು ಬುದ್ಧಿ ಹೇಳುತಿದ್ದಳು. ಭೀಮು 'ಹ್ಞೂ' ಎಂದು ಸುಮ್ಮನಾಗುತಿದ್ದ. ಉಪಾಧ್ಯಾಯರಿಂದ ಏಟು ಬೀಳುತಿದ್ದುವು. ಗೆಳೆಯರು ಛೇಡಿಸುತಿದ್ದರು. ಈ ಭೂಪತಿ ಅದಾವುದನ್ನೂ ಮನಸ್ಸಿಗೆ ಹಾಕಿಕೊಳ್ಳುತ್ತಿರಲಿಲ್ಲ.

ತಾನಾಯ್ತು; ತನ್ನ ಆಟವಾಯ್ತು.

ಒಮ್ಮೆ ಅವನು ಶಾಲೆಗೆ ಹೋಗುತಿದ್ದಾನೆ. ಬಲಪಕ್ಕದಿಂದ ಚಿಕ್ಕ ಹುಡುಗಿಯೊಂದು ಹಾದಿಯನ್ನು ಹಾಯ್ದು ಬರುತಿದ್ದಾಳೆ. ಅದೇ ಸಮಯದಲ್ಲಿ ಕಾರೊಂದು ವೇಗವಾಗಿ ಬರುತಿದ್ದುದನ್ನು ಕಂಡ ಭೀಮು. ಆ ತಕ್ಷಣವೇ ಧಾವಿಸಿ ಹುಡುಗಿಯನ್ನು ಎಳೆದುಕೊಂಡು ಆಗುತಿದ್ದ ದೊಡ್ಡ ಅಪಾಯವನ್ನು ತಪ್ಪಿಸಿದ.

'ಅದೃಷ್ಟ! ಸ್ವಲ್ಪದರಲ್ಲಿ ಅಪಾಯ ತಪ್ಪಿತು.' ಎಂದರು ಪಕ್ಕದಲ್ಲಿದ್ದ ಜನರು.

ಹಿಂದೆಯೇ ಮಗುವಿನ ತಂದೆ ಓಡಿಬಂದ. ಭಯಭೀತಿಯಿಂದ ಕಂಗಾಲಾದ ಹುಡುಗಿ ತಂದೆಯನ್ನು ತಬ್ಬಿಕೊಂಡಳು. ಆಗ ಅವನು ಭೀಮುವಿನ ಬೆನ್ನು ತಟ್ಟುತ್ತ 'ನನ್ನ ಮಗುವನ್ನು ಕಾಪಾಡಿದೆ. ನೀನು ತುಂಬಾ ಸಮಯ ಸ್ಫೂರ್ತಿಯುಳ್ಳವನು' ಎಂದು ಒಳ್ಳೆಯ ಮಾತಾಡಿ, ನೂರು ರೂಪಾಯಿನ ನೋಟು ಕೊಟ್ಟು ಪ್ರೋತ್ಸಾಹಿಸಿದ. ಭೀಮು ತನ್ನ ಬೆನ್ನನ್ನುತಾನೇ ತಟ್ಟಿಕೊಳ್ಳುವಷ್ಟು ಪುಳಕಿತನಾದ.

ಸುದ್ದಿ ಶಾಲೆಯನ್ನು ಮುಟ್ಟಿತು.

'ಹಾ! ಭೀಮರಾಯ! ಭೀಮ ಸಾಹಸವನ್ನೇ ಮಾಡಿದ್ದೀಯೆ!' ಎಂದರು ಉಪಾಧ್ಯಾಯರು; ಬಾಲಕನ ಬೆನ್ನುತಟ್ಟಿ.

'ಅಂದರೆ....?' ಬಿರಿಬಿರಿ ಕಣ್ಣುಗಳನ್ನು ಬಿಟ್ಟ ಹುಡುಗ, ಮನದಲ್ಲಿ ಆಶ್ಚರ್ಯ ತುಂಬಿತು.

'ಭೀಮ ಎಂದರೆ ನಿನಗೆ ತಿಳಿಯದೆ? ಪಂಚ ಪಾಂಡವರಲ್ಲಿ ಭೀಮ ಒಬ್ಬ, ಅವನು ಬಹಳ ಸಾಹಸಿಗ. ಅವನು ಯಾವೊಂದು ಕೆಲಸಕ್ಕೆ ಕೈ ಹಾಕಿದರೂ ಗೆಲವು ಕಟ್ಟಿಟ್ಟ ಬುತ್ತಿ. ಎಂದೂ ಸೋಲು ಕಂಡವನಲ್ಲ. ಅವನ ಹೆಸರನ್ನು ಹೊಂದಿದ ನೀನು ಅವನಂತೆಯೇ ಇರಬೇಕು! ಓದಿನಲ್ಲೂ ಭೀಮ ಸಾಹಸ ಮಾಡಬೇಕು! ತಿಳಿಯಿತೇ?''

ಆ ಉತ್ಸಾಹದ ಮಾತುಗಳು ಮನದಾಳಕ್ಕೆ ಇಳಿದುವು.

ಅದೇ ಉಪಾಧ್ಯಾಯರು ರಾಮುವಿಗೆ ಅನೇಕವೇಳೆ ಒಳ್ಳೆಯ ಮಾತನಾಡುತ್ತಾ 'ನೀನು ರಾಮುನಂತೆಯೇ ಸಾಹಸಿ! ನಿನ್ನ ಸಾಹಸವೇ ನಿನ್ನನ್ನು ಮುಂದೆ ನಡೆಸುತ್ತಿದೆ' ಎಂದಿದ್ದುಂಟು. ಇಂದು ಭೀಮನಿಗೆ 'ಸಾಹಸ' ಎಂದರೇನೆಂಬುದು ಅರ್ಥವಾಯಿತು. ತಾನು ಓದಿನಲ್ಲೂ ಇಂತಹ ಸಾಹಸ ಮಾಡಿದರೆ ಖಂಡಿತ ಮುಂದೆ ನಿಲ್ಲುವೆ ಎಂದುಕೊಂಡ. ಅಂದಿನಿಂದ ಭೀಮು ಹೆಚ್ಚು ಹೆಚ್ಚಾಗಿ ಓದತೊಡಗಿದ. ಬುದ್ಧಿಶಕ್ತಿ ದಿನೇ ದಿನೇ ಅರಳತೊಡಗಿತು. ಭೀಮು ಚೆನ್ನಾಗಿ ಓದಿ ವಿದ್ಯಾವಂತನಾದ.

ಮುಂದೆ ಉಪಾಧ್ಯಾಯರ ಪ್ರೀತಿಗೂ ಪಾತ್ರನಾದ. ತಾಯಿಯೂ ಹಿರಿ ಹಿರಿ ಹಿಗ್ಗಿದಳು.

ಚಿಟ್ಟಿ-ಕಿಟ್ಟಿ

ಬಿಲ್ಲಿ ಒಂದು ಬಿಳಿಯ ಹೆಣ್ಣು ಬೆಕ್ಕು.

ಬಿಲ್ಲಿಗೆ ಮುದ್ದಾದ ಪುಟ್ಟ ಪುಟ್ಟ ಎರಡು ಮರಿಗಳು. ಮಂಜಿನಂತಹ ಮೃದು ಮೈಯಿನ ಅವುಗಳ ಹೆಸರು ಚಿಟ್ಟಿ-ಕಿಟ್ಟಿ. ಎರಡೂ ತುಂಟ ಮರಿಗಳು. ಸದಾ ಚೆಲ್ಲಾಟ, ಕಚ್ಚಾಟ, ಇದ್ದದ್ದೇ. ಬಿಲ್ಲಿಗೆ ಮಕ್ಕಳು ಶುಭ್ರವಾಗಿರಬೇಕೆಂಬ ಆಶಯ.

ಅವುಗಳ ಮೈ ಬ್ರೆಷ್ ಮಾಡಿ, ಮುಖ ಒರೆಸಿ ಹತ್ತಿಯ ಮೆತ್ತೆಯ ಮೇಲೆ ಮಲಗಿಸಿ ಶಾಲು ಹೊದಿಸಿ ಕಾವಲು ಕೂರುತಿತ್ತು ಬಿಲ್ಲಿ. ತಾಯಿಯ ಕಟ್ಟುನಿಟ್ಟು ಮಕ್ಕಳಿಗೆ ಸಂಕಟ. ಅವು ಹಾರಬೇಕು; ನಿತ್ಯ ಚೆಲ್ಲಾಟ ಆಡಬೇಕು. ತಾಯಿ ಮನೆಯಲಿಲ್ಲದಾಗ ಮಾತ್ರ ಚೆಲ್ಲಾಟಕ್ಕೆ ಅವಕಾಶ.

'ಮಿಯಾವ್-ಮಿಯಾವ್! ಎಂದುಕೂಗಿ ಎಚ್ಚರಿಕೆ ನೀಡುತಿತ್ತು ಬೆಕ್ಕು.

ಮರಿಗಳು ಒಳಕೋಣೆ ಸೇರುತಿದ್ದುವು.

ಆದರೂ ತಾಯಿ ಅಡಿಗೆ ಮನೆಗೆ ಹೋದರಷ್ಟೇ ಸಾಕು. ಇವು ಚಂಗನೆ ಹೊರ ನೆಗೆದು ಮಣ್ಣಿನ ಧೂಳಿಯಲ್ಲಿ ಆಡಿ ಆಡಿ ಸದ್ದಿಲ್ಲದೆ ಒಳ ಸೇರುತಿದ್ದುವು.

ತಾಯಿಗೆ ಆಶ್ಚರ್ಯ....ಮರಿಗಳು ಹೇಗೆ ಕೊಳೆಯಾಗುತ್ತವೆ? ನೋಡಿದರೆ ಹಾಸಿಗೆಯಲ್ಲೇ ಇವೆ!

'ಹಾಂ! ನಿನ್ನ ಮೈ ಹೇಗೆ ಕೊಳೆಯಾಯಿತು ಮುದ್ದು ಮಗುವೆ?' ಬಿಲ್ಲಿ ಕೇಳಿತು.

'ನಾವು ಕೊಳೆ ಮಾಡಿಕೊಳ್ಳಲಿಲ್ಲ.'

'ನೀನು ಹೇಳು ಚಿಟ್ಟಿ!'

'ಆಗಿನಿಂದ ನಾವು ಇಲ್ಲೇ ಇದ್ದೇವೆ!'

'ಅಹಹ! ನೀವು ಹೇಳುತ್ತಿರುವುದು ಸುಳ್ಳು! ನನಗೊತ್ತು!'

'ಕಾದು ನೋಡು!'

ಚಿಟ್ಟಿಯ ಮಾತಿನಿಂದ ನಂಬಿಕೆ ಮೂಡಿತು ಬಿಲ್ಲಿಗೆ. ಎರಡು ಮರಿಗಳೂ ಮುಖ ಮುಖ ನೋಡಿಕೊಂಡು ಮುಸಿ ಮುಸಿ ನಕ್ಕವು. ಬಿಲ್ಲಿ ಕಿಟ್ಟಿಗೆ ಹೇಳಿತು 'ಹೋಗು ಬ್ರೆಷ್ ತಾ. ಇನ್ನೊಮ್ಮೆ ಬ್ರೆಷ್ ಮಾಡುವೆ.'

ಕಿಟ್ಟಿ ಹೋಗಿ ಬ್ರೆಷ್ ತರುತ್ತಲೂ ಎರಡರ ಮೈಯನ್ನೂ ಬ್ರೆಷ್ ಮಾಡಿ ಶುದ್ಧಗೊಳಿಸಿದಳು ಬಿಲ್ಲಿ.

ಅನಂತರ ಅದು ತನ್ನ ಕೆಲಸ ಕೈಕೊಳ್ಳುವ ಮುನ್ನ ಮಕ್ಕಳಿಗೆ ಮತ್ತೊಮ್ಮೆ ಎಚ್ಚರಿಕೆ ಹೇಳುವುದನ್ನು ಮರೆಯಲಿಲ್ಲ. ಆದರೂ ಮರಿಗಳು ತಾಯಿ ಒಳ ಹೋಗುವುದನ್ನೇ ಕಾಯುತಿದ್ದು ಅಂಗಳಕ್ಕೆ ಜಾರಿಕೊಂಡುವು. ಆ ಮಣ್ಣಿನ ಹುಡಿ ಎಷ್ಟು ಚೆಂದ! ತಾಯಿ ನಮ್ಮನ್ನು ಆಡಬೇಡ ಎಂದು ಏಕೆ ಹೇಳುತ್ತಾಳೋ ಅದೇ

ಅರ್ಥವಾಗದ ವಿಷಯ! ಮೈ ಕೊಳೆಯಾದರೆ ಏನಂತೆ
ಕೊಡವಿದರೆ ಹೋಗುತ್ತೆ! ಆಟ ಹೆಚ್ಚೋ! ಕೊಳೆ ಹೆಚ್ಚೋ....?

ಆ ವಿಚಾರಧಾರೆ ಕೈಕಾಲುಗಳಿಗೆ ಹುರುಪು ನೀಡಿತು. ಎರಡೂ
ಆಡುವಷ್ಟು ಆಡಿ ಒಳ ಬಂದು ಸದ್ದಿಲ್ಲದೆ ಹತ್ತಿಯ ಮೆತ್ತೆಯ ಮೇಲ
ಕುಳಿತುಕೊಂಡುವು.

ಬಿಲ್ಲಿ ಕೆಲಸ ಮುಗಿಸಿ ಬಂದು ನೋಡಿದರೆ ಮತ್ತೆ ಅದೆ
ಗೋಳು.

'ಇದೇನಿದು? ಹೇಗೆ ಮೈ ಕೊಳೆಯಾಯಿತು?' ಕೇಳಿತು ಬಿಲ್ಲಿ

'ನಾವು ಇರುವುದೇ ಹೀಗೆ!'

'ಏ ಕಳ್ಳಿ! ನಿನ್ನ ಮೈ ಮಂಜಿನ ಬಿಳುಪು! ಎಲ್ಲಿ ಆಡಿದರೂ ಮೈ
ಕೊಳೆಯಾಗಬಾರದು ಗೊತ್ತೆ?'

ತಾಯಿ ಮತ್ತೆ ಎಚ್ಚರಿಕೆ ಹೇಳಿತು. ಮೀಯಾವ್
ಮೀಯಾವ್! ಒಳ್ಳೆಯ ಮಕ್ಕಳಾಗಿರಿ....

'ಇದಕ್ಕೇನುಪಾಯ?'

ಕಿಟ್ಟಿ ಮನದಲ್ಲೇ ಯೋಚಿಸಿತು. ಚಿಟ್ಟಿಗೂ ಅದೇ ಸಮಸ್ಯೆ.

★ ★ ★

ತಾಯಿ ಒಳ ಕೆಲಸದಲ್ಲಿದ್ದಾಗ ಕಿಟ್ಟಿ ಕಿವಿ ನಿಮಿರಿಸಿ ಹೇಳಿತು
'ನನಗೊಂದು ಉಪಾಯ ಹೊಳೆದಿದೆ. ಅಮ್ಮನಿಗೆ ಗೊತ್ತಾಗದ
ರೀತಿಯಲ್ಲಿ ಮಾಡಬೇಕು ತಿಳಿಯಿತೇ?'

'ಏನು ಹೇಳು?' ಎಂದಿತು ಚಿಟ್ಟಿ ಕಿವಿಗೊಟ್ಟು ಕೇಳುತ್ತ.

‘ಆ ಬ್ರೆಷ್ಷನ್ನೇ ಮಣ್ಣಿನಲ್ಲಿ ಅದ್ದಿ ಮಣ್ಣು ಮಾಡಿಟ್ಟರೆ ಆಯಿತಲ್ಲ. ಅಮ್ಮ ಬ್ರೆಷ್ ಮಾಡಿದರೂ ಇದೇ ಬಣ್ಣ! ಅಮ್ಮ ಇನ್ನು ಕೊಳೆ ಎನ್ನುವಂತಿಲ್ಲ.’

‘ಅದೇ ಸೈ!’ ಚಿಟ್ಟಿ-ಕಿಟ್ಟಿ ಆನಂದದಿಂದ ಕುಣಿದಾಡಿದುವು.

ಎರಡು ಮರಿಗಳೂ ಅಂಗಳಕ್ಕೆ ಜಾರಿಕೊಂಡು ಬ್ರೆಷ್ಷನ್ನು ಮಣ್ಣಿನ ಹುಡಿಯಲ್ಲಿ ಉಜ್ಜಿ ಕೊಡವಿ ತಂದಿಟ್ಟು ಏನೂ ತಿಳಿಯದಂತೆ ಸುಮ್ಮನಿದ್ದುವು. ತಾಯಿ-ಬಿಲ್ಲಿಯ ಕೆಲಸ ಮುಗಿಯಿತು. ಇನ್ನು ಮಕ್ಕಳ ಕಡೆ ಗಮನ ಕೊಡುವುದು ಮಾತ್ರ. ಅರಳೆಯಂತಹ ಮೈಯನ್ನು ಒರಸಿ ಬ್ರೆಷ್ ಮಾಡಿ ಕೆಂಪು ರಿಬ್ಬನ್ನಿನ ‘ಬೊ’ ಕಟ್ಟಿದರೆ ಎಷ್ಟು ಚೆಂದ? ಕೈ ಚೀಲ, ಕಾಲುಚೀಲ, ಪುಟ್ಟ ಪುಟ್ಟ ಅಂಗಿಗಳು ಎಲ್ಲಾ ಇವೆ. ಅವುಗಳನ್ನು ಒಗೆದು ಮಡಿಮಾಡುವುದು ತನಗೆ ದೊಡ್ಡ ಕೆಲಸವೇ. ಬಿಲ್ಲಿ ಬಟ್ಟೆಗಳನ್ನು ಮಡಿಸಿಟ್ಟು ಸ್ವಚ್ಛತೆಯನ್ನು ಮುಗಿಸಿ ಬ್ರೆಷ್ ತೆಗೆದುಕೊಂಡು ಬಂದರೆ ಮರಿಗಳಿಗೆ ಒಳಗೊಳಗೇ ನಗು! ಕಿಸಿಮಿಸಿ....ಕಿಸಿಮಿಸಿ.

ಬಿಲ್ಲಿ ಕಿಟ್ಟಿಯ ಮೈಯನ್ನು ಒಂದೇ ಸಮನೆ ಬ್ರೆಷ್ ಮಾಡಿದರೂ ಕೆಂಬಣ್ಣವೇ!

‘ಅರೆ! ಇದೇನು!’

ಬಿಲ್ಲಿಗೆ ಮಕ್ಕಳ ಉಪಾಯ ಹೊಳೆಯಲಿಲ್ಲ. ಪುನಃ ಪುನಃ ಬ್ರೆಷ್ ಮಾಡಿದರೂ ಅದೇಗತಿ! ಅರೆರೆ! ಇಬ್ಬರ ಮೈಯೂ ಕೆಂಬಣ್ಣ! ಈ ಸಲಿ ಇಬ್ಬರಿಗೂ ಸ್ನಾನ ಮಾಡಿಸುವುದು ಒಳ್ಳೆಯದು

ಎಂದುಕೊಂಡ ಬಿಲ್ಲಿ ಬೇಸಿನ್ನಿನಲ್ಲಿ ಬಿಸಿನೀರು ಸೋಪ
ಅಣಿಗೊಳಿಸಿತು. ಮಕ್ಕಳಿಗೆ ಮನವೆಲ್ಲಾ ಮುಜುಗರ. ಆದರೆ
ತಾಯಿ ಬಿಡಬೇಕಲ್ಲ? ಇಬ್ಬರನ್ನೂ ಬೇಸಿನ್ನಿನಲ್ಲಿ ಅದ್ದಿ ಸ್ನಾ
ಮಾಡಿಸಿದ ನಂತರ ಪೌಡರ್ ಹಾಕಿ ಹಾಸಿಗೆ ಮೇಲೆ ಮಲಗಿ
ಶಾಲು ಹೊದಿಸಿದಳು.

ಒಳ್ಳೆಯ ಸ್ನಾನದಿಂದ ಮೈ ಹಗುರವಾಗಿ ಲವಲವಿ
ಮೂಡಿತು. ಮೇಲಾಗಿ, ಮೈಯೆಲ್ಲಾ ಪೌಡರಿನ ಸುವಾಸನೆ
ಘಮಘಮಿಸುವ ಸುಗಂಧ!

ಆಹಾ! ಅದೆಷ್ಟು ಚೆಂದ!

ಚಿಟ್ಟಿ ಮೈಯನ್ನು ಸವರಿಕೊಳ್ಳುತ್ತ ಹೇಳಿತು 'ಅಮ್ಮ ನಮ
ಸ್ನಾನ ಮಾಡಿಸದೆ ಬರೀ ಪೌಡರ್ ಹಾಕುವುದಾದರೆ ಎಷ್ಟು
ಒಳ್ಳೆಯದು. ಆದರೆ ಅವಳು ಒಪ್ಪುವುದೇ ಇಲ್ಲ. ಅವಳ ಮಾತೆ
ನಡೆಯಬೇಕು!'

'ತಾಳು, ಅವಳೊಮ್ಮೆ ಹೊರ ಹೋಗಲಿ! ನಾವಿಬ್ಬರೂ
ಇನ್ನೊಮ್ಮೆ ಪೌಡರ್ ಹಾಕಿಕೊಳ್ಳಬಹುದು.'

'ಇದೀಗ ಸರಿ! ಮಣ್ಣಾಡಿದ ಮೇಲೆ ಹಾಕಿಕೊಂಡರ
ಕೊಳೆಯು ಕಾಣಿಸುವುದಿಲ್ಲ!'

ಆ ಮಾತಿಗೆ ಮೆಚ್ಚಿತು ಕಿಟ್ಟಿ.

ತಾಯಿ ಮೊಟ್ಟೆ ತರಲು ಹೊರಟಳು ಅಂಗಡಿಗೆ. ಮಕ್ಕಳ
ಅವಳು ಹೊರಹೊದುದೇ ಸಾಕೆಂದು ಬೀರುವಿನಿಂದ ಪೌಡರ

ಡಬ್ಬಿಯನ್ನು ತೆಗೆದುಕೊಂಡು ಮೈಗೆ ಸುರಿದುಕೊಂಡುವು. ಉತ್ಸಾಹ ತೋರಿದಷ್ಟೂ ಹೆಚ್ಚು ಪೌಡರ್ ಚೆಲ್ಲಿ ಭೂಮಿಯ ಪಾಲಾಯಿತು! ಮರಿಗಳು ಅದರ ಕಡೆ ಲಕ್ಷ್ಯವಿಲ್ಲದೆ ಕುಣಿದು ಚೆನ್ನಾಟವಾಡಿದುವು.

ಬಿಲ್ಲಿ ಮನೆಗೆ ಬಂದರೆ ಒಳಗೆಲ್ಲಾ ಘಮ ಘಮ! ಘಮ ಘಮ!

'ಅಯ್ಯೊ, ಏನು ಮಾಡಿ ಬಿಟ್ಟೆ?'

ಮರಿಗಳು ಮಾತಾಡಬೇಕೆ?

ತಾಯಿ-ಬಿಲ್ಲಿಗೆ ಪೌಡರ್ ಹಾಳಾದುದು ಹೊಟ್ಟೆಯೆಲ್ಲಾ ಉರಿ.

★ ★ ★

ಕಿಟ್ಟಿ-ಚಿಟ್ಟಿ ಪರಸ್ಪರ ಕಚ್ಚಾಟ ಪರಚಾಟಗಳಲ್ಲಿ ತೊಡಗಿದ್ದಾಗಲೇ ಬಿಲ್ಲಿ ಒಳ ಹೆಜ್ಜೆಯಿಟ್ಟಿದ್ದಳು. ಒಮ್ಮೆಲೇ ಆಶ್ಚರ್ಯಚಕಿತಳಾಗಿ 'ಮೀಯಾವ್-ಮಿಯಾವ್' ಎಂದಳು ದೊಡ್ಡದನಿಯಲ್ಲಿ. ಮಕ್ಕಳು ಕಚ್ಚಾಟವನ್ನು ನಿಲ್ಲಿಸಿ ಒಂದೇ ಬಾರಿಗೆ ತಾಯಿಯ ಬಳಿಗೆ ಜಿಗಿದು ದೂರು ಕೊಟ್ಟುವು.

'ಕಿಟ್ಟಿಯೇ ಮೊದಲು ಪರಚಿದ್ದು!'

'ಅಲ್ಲಮ್ಮಾ! ಚಿಟ್ಟಿಯೇ ಮೊದಲು ಕಚ್ಚಿದ್ದು!'

'ಹಾಂ! ಹೀಗಾದರೆ ಹೇಗೆ ಮಕ್ಕಳಿರಾ? ಸ್ನೇಹ-ಒಗ್ಗಟ್ಟು ಇರಬೇಕು ನಮ್ಮಲ್ಲಿ. ಇಲ್ಲದಿದ್ದಲ್ಲಿ ಟಾಮಿ ನಾಯಿಯ ಪಾಲಾಗುತ್ತೀರಿ ಅಷ್ಟೆ!'

ಓ, ನಿಜ! ಟಾಮಿ ನಾಯಿ ಬಲು ಕ್ರೂರಿ! ಆ ನೆನಪು ಬಂದಾಗ ಇಬ್ಬರಿಗೂ ಮೈನವಿರು ನಿಮಿರಿತು. ಮರುಕ್ಷಣದಲ್ಲಿ ಎಲ್ಲಿದೆ ಆ ನೆನಪು?

ಇಬ್ಬರೂ ಓಡಿ ತಾಯಿಯ ಮೈಯೇರಿ ಮುದ್ದಿಸಿ ಮುದ್ದಿಟ್ಟುವು.

ಬಿಲ್ಲಿ ಎರಡು ಮೊಟ್ಟೆಗಳ ಆಮ್ಲೆಟ್ ಮಾಡಿದ್ದಾಳೆ. ಅದು ತಾಯಿ ಮಕ್ಕಳಿಗೆ ಮೂರು ಸಮ ಪಾಲಾಗಬೇಕು. ಆದರೆ ಮಕ್ಕಳು ಬಿಡಬೇಕಲ್ಲ?

'ಅಮ್ಮಾ! ನನಗೆ ಇನ್ನಿಷ್ಟು....!'

'ಅಮ್ಮಾ ನನಗೆ ಇನ್ನಿಷ್ಟು....!'

ಮಕ್ಕಳು ಹಾಗೆಂದು ಗೋಗರೆಯುತಿದ್ದರೆ ಬಿಲ್ಲಿಗೆ ಉಳಿಯುವುದಾದರೂ ಎಲ್ಲಿ? ಆದರೂ ಅವಳಿಗೆ ತನಗೂ ಸ್ವಲ್ಪ ಇರಲೆಂಬ ಆಸೆ. ಮಕ್ಕಳು ತಾಯಿಯ ಆಸೆಯನ್ನು ಕಡೆಗಣಿಸಿ ಒಂದೇ ಸಮನೆ ಮುರುಮುರುಗುಡುತ್ತ ಕಿತ್ತಾಡಿ ಮುಗಿಸಿಯೇ ಬಿಟ್ಟುವು! ಬಿಲ್ಲಿ ಬಾಯಿಯಲ್ಲಿ ನೀರೂರಿಸಿಕೊಂಡು ನೋಡುತ್ತಲೇ ಇದ್ದಾಳೆ. ತನಗೆ ಒಂದು ಚೂರಾದರೂ ಉಳಿಯಬಹುದೇನೋ ಎಂಬ ಆಶೆಯಿಂದ. ತಟ್ಟೆಯಲ್ಲಿ ಚೂರು ಉಳಿಯುವುದಿರಲಿ, ಚೆನ್ನಾಗಿ ನೆಕ್ಕಿಬಿಟ್ಟುವು ಕೂಡ. ಅದರ ವಾಸನೆಯೂ ಉಳಿಯದಂತೆ.

'ಮಿಯಾವ್-ಮಿಯಾವ್!' ಗದ್ದರಿಸಿ ಹೇಳಿತು ಬಿಲ್ಲಿ.

ಇಷ್ಟೊಂದು ದುರಾಸೆ ಇರಬಾರದು ಮಕ್ಕಳಿಗೆ. ನನಗೊಂದಿಷ್ಟೂ ಇಲ್ಲದಂತೆ ತಿಂದಿರಲ್ಲವೇ?

'ಇಲ್ಲಮ್ಮಾ! ಇಲ್ಲಮ್ಮಾ! ಸೇರಿಸಿ ಇನ್ನೆಂದೂ ನಾವು ಹೀಗೆ ಮಾಡುವುದಿಲ್ಲ....ಗೋಗರೆಯಿತು ಚಿಟ್ಟಿ.

'ಖಂಡಿತ ಇನ್ನು ಹೀಗೆ ವರ್ತಿಸುವುದಿಲ್ಲ. ತಿನ್ನುತಿದ್ದಂತೆ ನಾಲಿಗೆಗೆ ರುಚಿ ಹತ್ತಿತು ಅಷ್ಟೆ. ಕಿಟ್ಟಿ ತಾಯಿಯ ಹೊಟ್ಟೆಯಡಿ ನುಸಿದು ಬಣ್ಣನೆಯ ಮಾತಾಡಿತು.

★ ★ ★

ಇಂದು ಬಜಾರಿನಿಂದ ಮೀನು ತರುವುದಿತ್ತು. ಬಿಲ್ಲಿ ಹೊರಡುವ ಮುನ್ನ ಮಕ್ಕಳಿಗೆ ಕೈ ಚೀಲ ಕಾಲುಚೀಲ ತೊಡಿಸಿ ಕೆಂಪು ರಿಬ್ಬನ್ನಿನ 'ಬೊ' ಕಟ್ಟಿ ಅಲಂಕರಿಸಿ 'ಇಬ್ಬರೂ ಒಳಗಡೆಯೇ ಇರಿ. ಮೈಕೊಳೆ ಮಾಡಿಕೊಳ್ಳಬಾರದು!' ಎಂದು ಆದೇಶ ನೀಡಿತು.

'ಮಿಯಾವ್-ಮಿಯಾವ್' ಬಿಲ್ಲಿ ಹೊರಟಿತು, ಟಾಟಾ ಹೇಳಿ.

ಮಕ್ಕಳು ಒಳಗಿಂದಲೇ ಟಾಟಾ ಹೇಳಿದುವು ಸಣ್ಣ ದನಿಯಲ್ಲಿ 'ಮಿಯಾವ್-ಮಿಯಾವ್!'

ತಾಯಿ ಕಣ್ಮರೆಯಾದುದುದೇ ತಡ ಚಿಟ್ಟಿ ಎದ್ದು ನಿಂತು ಹೇಳಿತು 'ಅಮ್ಮ ಹಿಂದಿರುಗುವುದರೊಳಗಾಗಿ ನಾವು ಅಪ್ಪಾಲೆ-ತಿಪ್ಪಾಲೆ, ಐಸ್-ಪೈಸ್, ಕಣ್ಣುಮುಚ್ಚಾಲೆ ಆಡಲೇಬೇಕು!'

'ಆಗಲಿ, ಯಾವುದು ಮೊದಲು?' ಕೇಳಿತು ಕಿಟ್ಟಿ.

'ಯಾವುದಾದರೂ ಸರಿ!'

ಎರಡೂ ಒಟ್ಟಿಗೆ ಹೊರಕ್ಕೆ ನೆಗೆದುವು. ಆಟವೇ ಆಟ. ಅಪ್ಪಾಲೆ-ತಿಪ್ಪಾಲೆಯೋ ಮರಕೋತಿ ಆಟವೋ ಇನ್ನಾವುದೋ ಗೊತ್ತು ಗುರಿಯಿಲ್ಲದ ಆಟಗಳು! ಕೆಲವೇ ಕ್ಷಣಗಳಲ್ಲಿ ಕೈಚೀಲ ಕಾಲುಚೀಲಗಳು ಮಣ್ಣಾಗಿ ಮಾಸಿದುವು. ಆದರೂ ಕೊನೆಯದಾಗಿ ಅಲ್ಲಿ ಹರಿಯುತಿದ್ದ ನೀರಿನ ಕಾಲುವೆಯನ್ನು ಈಚೆಯಿಂದ ಆಚೆಗೆ ಹಾರಿ ದಾಟುವ ಇಚ್ಛೆ ಪುಟಿಪುಟಿಯಿತು. ನಾನು ಮುಂದು; ತಾನು ಮುಂದು. ಹಠವೇ ಹಠ. ಎರಡೂ ಇಲ್ಲಿಂದಲ್ಲಿಗೆ ಹಾರಿ ಜಯಗಳಿಸಿದರೂ ಕೈಕಾಲು ಕೆಸರಿನ ಮುದ್ದೆ! ಅಮ್ಮ ಇಷ್ಟರಲ್ಲೇ ಹಿಂದಿರುಗುವ ಹೊತ್ತು! ಆ ಯೋಚನೆ ಬಂದೊಡನೆಯೇ ಎರಡೂ ಮುಖ ಮುಖ ನೋಡಿಕೊಂಡುವು.

'ಅಮ್ಮ ಬರುವ ಮುಂಚೆ ಒಗೆದು ಒಣಗಿಸೋಣ!'

ಚಿಟ್ಟಿಯ ಮಾತಿಗೆ ಕಿಟ್ಟಿ ಒಪ್ಪಿತು. ಎರಡೂ ತೊಡಿಗೆಗಳನ್ನು ಕಳಚಿ ಒಗೆಯತೊಡಗಿದರೆ ಕೊಳೆ ಹೋಗುವುದಿರಲಿ ಮೈಕೈ ತೊಯ್ದು ಮೈಯೇ ಕೊಳೆಯಾಯಿತು! ಎರಡೂ ಒಳ ಹೋಗಿ ಮೈ ಒರಸಿಕೊಂಡು ಮೆತ್ತೆಯನ್ನು ಸೇರಿದಾಗಲೇ ತಾಯಿ ಬಿಲ್ಲಿ ಮೀನಿನೊಡನೆ ಒಳ ಬಂದಿತು. ಕೂಡಲೇ ಮಕ್ಕಳಿಗೆ ಬಾಯಲ್ಲಿ ನೀರೂರಿತು. ತಮ್ಮ ಅಸಭ್ಯತೆಯ ಪರಿಚಯವಾದರೆ ಮೀನಿಗೆ ಚಕ್ರ ಬೀಳಬಹುದೆಂದು ಮೈ ತುಂಬಾ ಶಾಲು ಹೊದ್ದು ಕುಳಿತುವು ಸಭ್ಯತೆಯನ್ನು ಮೀರಿಸುವಂತೆ!

ತಾಯಿಗೆ ಮಕ್ಕಳಲ್ಲಿ ಯಾವ ಲೋಪವೂ ಕಾಣಿಸಲಿಲ್ಲ. ಅವಳು ತುಂಬಾ ಹೊಗಳಿದಳು.

'ನೀವಿಂದು ತುಂಬಾ ಒಳ್ಳೆಯ ಮಕ್ಕಳಾಗಿದ್ದೀರಿ! ಅದೇ ಸಂತೋಷ! ಮೀನು ಕರೆದು ಊಟ ತಯಾರಿಸುವವರೆಗೂ ಅಲ್ಲಿಯೇ ಇರಿ.'

'ಆಗಲಿ. ಆಗಲಿ!'

'ನನ್ನ ಮುದ್ದು ಮಕ್ಕಳೇ! ಮಿಯಾವ್!

'ಓ, ತಾಯಿಯ ದನಿಯಲ್ಲಿ ಎಂತಹ ಸವಿ ಇತ್ತು! ಸ್ವಲ್ಪವಾದರೂ ಕೋಪದ ಗಂಧವೇ ಇರಲಿಲ್ಲ! ಇಂದು ಕರಿದ ಮೀನಿನ ಊಟ!'

'ಆಹ! ಎಂತಹ ರುಚಿ!'

ನಾಲಿಗೆ ನೊಣೆಯಿತು ಚಿಟ್ಟಿ. ಎರಡೂ ಮರಿಗಳ ಕಣ್ಣಿನಲ್ಲಿ ಆಸೆಯ ಬೆಳಕು ಮಿಂಚಿ ಮಾಯವಾಯಿತು. ಒಮ್ಮೆಗೇ ಒಳ ಹೋಗುವ ಮನಸ್ಸು. ಕೈಚೀಲ ಕಾಲ್ಚೀಲಗಳಿಲ್ಲದಿರುವುದು ಕಿನಿಸಿಗೆ....ಆಸೆಗೊಂದು ಲಗಾಮು.

'ಸ್ವಲ್ಪ ಹೊತ್ತಿನೊಳಗಾಗಿಯೇ ಒಳಗಿಂದ ಕರೆ! ಮುದ್ದು ಮಕ್ಕಳೇ! ಊಟ ಅಣಿಯಾಯಿತು ಮಿಯಾವ್!'

ಎರಡೂ ಮರಿಗಳು ಹಾಸಿಗೆಯಿಂದ ಚಂಗನೆ ನೆಗೆದು ಓಡಿದುವು.

ಬಿಲ್ಲಿ ಅರಳುಗಣ್ಣುಗಳಿಂದ ಮಕ್ಕಳನ್ನು ನೋಡಿ 'ನಿಮ್ಮ ಚೀಲಗಳೆಲ್ಲಿ?' ಎಂದಳು.

'ಊಟಕ್ಕಾಗಿ ಕಳಚಿದ್ದು!'

'ತಾಯಿ ಕರುಣೆಯಿಂದ ನಕ್ಕಳು.

ಮೂವರಿಗೂ ಮೂರು ತಟ್ಟೆ ಮೀನು! ಎಂತಹ ಸುವಾಸನೆ! ಇನ್ನೂ ಬಿಸಿಯಾರದ ತಟ್ಟೆ....ಮೂಸಿ ನೋಡಿದರೂ ತಿನ್ನುವಂತಿಲ್ಲ, ಬಿಸಿಯೋ ಬಿಸಿ!

ಚಿಟ್ಟಿ ಸಂತೋಷದಿಂದ ನುಡಿಯಿತು 'ಅಮ್ಮ! ನೀನು ಎಷ್ಟು ಒಳ್ಳೆಯವಳು?'

'ಹೌದಮ್ಮಾ! ನೀನು ತುಂಬಾ ಒಳ್ಳೆಯವಳು! ಮೀನು ಮೊಟ್ಟೆ ಇನ್ನಾರು ಕೊಡುತ್ತಾರೆ?'

ಮಕ್ಕಳ ಮಾತಿಗೆ ನಸು ನಕ್ಕಳು ತಾಯಿ.

ಊಟ ತಣ್ಣಗಾಗಿಕ್ಕೈ ಹಚ್ಚಿದರು ಮಕ್ಕಳು. ಆ ರುಚಿಯ ಸ್ವಾದ ಹೇಳತೀರದು. ಮುಳ್ಳುಗಳು ನಾಲಿಗೆಗೆ ಚುಚ್ಚುತಿದ್ದರೂ ನಿಧಾನಿಸಲಿಲ್ಲ. ಒಂದೇ ಗಳಿಗೆಯಲ್ಲಿ ಮುಗಿಯಿತು ಊಟ. ಅವು ಚಂಗನೆ ಹಾರಿದುವು ಕೊಠಡಿಯ ಕಡೆಗೆ. ಹೊಟ್ಟೆ ಭಾರವಾಗಿದ್ದರೂ ಆಡುವ ಮನಸ್ಸು. ಚಿಟ್ಟಿ ಮುರು ಮುರು ಎನ್ನುತ್ತ ಕಿಟ್ಟಿ ರಿಬ್ಬನ್ ಬೊ ಎಳೆಯಿತು. ಅದು ಬಿಚ್ಚಿ ಹರಡಿಕೊಳ್ಳುತ್ತಲೂ ಆದರ ಕಿತ್ತಾಟ ಎಳೆದಾಟ ಆರಂಭವಾಯಿತು. ಸರಿ, ಚಿಟ್ಟಿಯ ರಿಬ್ಬನ್ನೂ ಎಳೆದಾಟದಲ್ಲಿ ಬಿಚ್ಚಿಕೊಂಡಿತು. ಅವನ್ನು ಅತ್ತಿತ್ತ ಎಳೆದಾಡುತ್ತ ಚಿನ್ನಾಟವಾಡುತ್ತಿರುವಾಗಲೇ ಒಳಗಿನಿಂದ ತಾಯಿಯ ಕರೆ ಕೇಳಿಸಿತು.

'ಮಿಯಾವ್-ಮಿಯಾವ್!'

ಮರಿಗಳೆರಡೂ ಒಳಗಡೆ ಓಡಿದುವು. ಅಲ್ಲಿ ತಾಯಿ ಇರಲಿಲ್ಲ. ತೆರೆದ ಮೀನಿನ ಪಾತ್ರೆ ಕೆಳಗಡೆಯಿತ್ತು. ಆದರಲ್ಲಿ ಮೀನಿರಲಿಲ್ಲವಾದರೂ ರಸ ಮೆತ್ತಿತ್ತು. ಆಹ, ಎಂತಹ ರುಚಿ!

ಮರಿಗಳೆರಡೂ ಅದನ್ನು ನೆಕ್ಕತೊಡಗಿದುವು!

ಬಿಲ್ಲಿ ಕರೆದದ್ದು ಕೈಚೀಲ ಕಾಲುಚೀಲಗಳ ಕೊಳೆಯನ್ನು ನೋಡಿ....ಎಷ್ಟು ಹೊತ್ತಾದರೂ ಮಕ್ಕಳು ಬಾರದುದರಿಂದ ಒಳ ಬಂದು ನೋಡುತ್ತಾಳೆ ರಿಬ್ಬನ್-ಗಳು ಕಿತ್ತಾಟದಿಂದ ಹರಿದು ಚಿಂದಿ ಚಿಂದಿ!

ಮಕ್ಕಳು ಮೀನಿನ ಮಡಿಕೆಯಲ್ಲಿ!

ಬಿಲ್ಲಿ ಸಿಟ್ಟಿನಿಂದ ಚೀರಿತು 'ಮಿಯಾವ್-ಮಿಯಾವ್!'

ಮರಿಗಳು ಉತ್ತರಿಸದೆ ನೆಕ್ಕುತ್ತಲೇ ಇವೆ! ಇನ್ನೂ....ಇನ್ನೂ....

ಭಾರತೀಯ ಧರ್ಮ ಸಂಸ್ಕೃತಿ
ಲೋಕಮಾನ್ಯ ವಿಸ್ತೃತಿ
ವೇದ ವೇದಾಂತ ಧಾರಿಣಿ
ಆತ್ಮ ವಿಶ್ವಾಸ ಕಾರಿಣಿ

ಓಣಂ

ಮಳೆಗಾಲ ಮುಗಿದ ಸಮಯ.... ಭೂಮಿಯೆಲ್ಲಾ ಹೊಸ ಹೊಸ ಚಿಗುರುಗಳಿಂದ ಹಸಿರು.

ಎಲ್ಲಿ ನೋಡಿದರೂ ಹಸಿರು ಕಾಯಿ ಪಲ್ಲೆಗಳ ರಾಶಿ ರಾಶಿ. ಹಣ್ಣು ಹಂಪಲುಗಳ ಕಂಪು-ಇಂಪು.

ಮೀರಾ ಶಾಲೆಯಿಂದ ಹಿಂದಿರುಗುವ ಹಾದಿಯೆಲ್ಲೆಲ್ಲಾ ಊರಿನ ಜನರ ಸಡಗರವನ್ನು ಕಣ್ತುಂಬ ನೋಡುತ್ತಲೇ ಬಂದಿದ್ದಾಳೆ. ಮನೆಯ ಮುಂಬಾಗಿಲಲ್ಲಿ ಹಚ್ಚ ಹಸಿರು ತೋರಣ. ಒಳಗಡೆ ಹಣ್ಣು ಹೂಗಳ ಸುವಾಸನೆ. ಮೀರಾ ಮೂಗಿನಲ್ಲಿ ಘಂ-ಮನೆ ಉಸಿರೆಳೆಯುತ್ತಾ 'ಏನಮ್ಮಾ ಇಂದಿನ ವಿಶೇಷ?' ಎಂದಳು ಕಣ್ಣುಗಳನ್ನರಳಿಸಿ.

'ಹಾಂ! ನಾಳೆಯಿಂದ ಓಣಂ ಅಲ್ಲವೇ?'

'ಓ! ನಾಳೆಯಿಂದಲೇ ಶುರುವಾಯಿತೇ?'

'ಹೌದು, ಮಗೂ!'

'ಅಂದಹಾಗೆ ಈ ಹಬ್ಬದ ಹಿನ್ನೆಲೆ ಏನಮ್ಮಾ?'

'ಕೇಳು, ಮೀರಾ! ಇದೊಂದು ಪುರಾಣ ಕಥೆ. ಬಲಿ ಚಕ್ರವರ್ತಿ

ಎಂಬ ಅಸುರಪತಿ ಮೂರು ಲೋಕಗಳಲ್ಲಿ ಚಕ್ರಾಧಿಪತ್ಯ ನಡೆಸುತಿದ್ದ. ಅವನ ಪ್ರಭುತ್ವದಿಂದ ದೇವತೆಗಳು ತುಂಬಾ ಕಷ್ಟಕ್ಕೆ ಸಿಕ್ಕಿದ್ದರು. ಒಮ್ಮೆ ಅವರೆಲ್ಲಾ ವಿಷ್ಣುವಿನ ಬಳಿಗೆ ಹೋಗಿ, ಬಲಿ ಚಕ್ರವರ್ತಿಯನ್ನು ಅಧಿಕಾರದಿಂದ ಕಿತ್ತೊಗೆಯಬೇಕೆಂದು ಒಮ್ಮತದಿಂದ ಕೇಳಿಕೊಂಡರು.

'ಆಗ ವಿಷ್ಣುವು ವಾಮನ ಎಂಬ ಹೆಸರಿನಿಂದ ಪುಟ್ಟ ಬ್ರಹ್ಮಚಾರಿಯ ವೇಷ ಧರಿಸಿ ಬಲಿ ಚಕ್ರವರ್ತಿಯ ಬಳಿಗೆ ಹೋದ. ರಾಜ ಸಭೆಯಲ್ಲಿ ವಾಮನ ನನಗೆ ಮೂರು ಪಾದಗಳಷ್ಟು ಭೂಮಿಯನ್ನು ನೀಡಬೇಕೆಂದು ಬಲಿ ಚಕ್ರವರ್ತಿಯನ್ನು ಕೇಳಿಕೊಂಡ.

'ಆ ಪುಟ್ಟ ಬ್ರಾಹ್ಮಣ ಕೇವಲ ವೇಷಧಾರಿಯಾದ ವಿಷ್ಣು ಎಂಬುದನ್ನು ಅರಿಯಲಿಲ್ಲ ಬಲಿ ಚಕ್ರವರ್ತಿ. ವಟುವಿನ ಪುಟ್ಟ ಬೇಡಿಕೆಯನ್ನು ಹಾಸ್ಯ ಭಾವದಿಂದ ಸ್ವೀಕರಿಸಿದ. ಕೇವಲ ಮೂರು ಪಾದ ಭೂಮಿಯನ್ನು ದಾನಮಾಡಲು ಸಿದ್ಧನಾದ. 'ತಥಾಸ್ತು' ಎಂದು ಹೇಳಿಯೂ ಬಿಟ್ಟ.

ಆದರೆ, ಆತ ಕಂಡದ್ದೇನು?

ಪುಟ್ಟ ವಾಮನ ಇಡೀ ವಿಶ್ವವನ್ನೇ ವ್ಯಾಪಿಸುವಂತೆ ಬೃಹದ್ ರೂಪ ತಾಳಿದ್ದಾನೆ! ಅವನ ಮೊದಲ ಪಾದವು ಇಡೀ ಭೂಮಂಡಲವನ್ನು ಮೆಟ್ಟಿತು. ಎರಡನೆಯ ಪಾದವು ಆಕಾಶವನ್ನೇ ವ್ಯಾಪಿಸಿತು. ಇನ್ನು ಮೂರನೆಯ ಪಾದ ಎಲ್ಲಿಡಬೇಕು?

ಅದು ಮುಂದಿನ ಪ್ರಶ್ನೆ.

ಬಲಿ ಚಕ್ರವರ್ತಿ ಈ ಸಮಸ್ಯೆಗೆ ಬೇರೆ ಉಪಾಯ ಕಾಣದೆ ಕೊಟ್ಟ ಮಾತಿಗೆ ತಪ್ಪಬಾರದೆಂದು ವಾಮನನಿಗೆ ವಂದಿಸಿ 'ಮೂರನೆಯ ಪಾದವನ್ನು ನನ್ನ ತಲೆಯ ಮೇಲಿಡು' ಎಂದು ಕೇಳಿಕೊಂಡ.

ವಾಮನ, ಬಲಿ ಚಕ್ರವರ್ತಿಯ ತಲೆಯ ಮೇಲೆ ಪಾದವನ್ನಿಟ್ಟು ಅದುಮಿದ. ಆ ಕ್ಷಣವೇ ಬಲಿ ಚಕ್ರವರ್ತಿ ಪಾತಾಳಕ್ಕೆ ತಳ್ಳಲ್ಪಟ್ಟ. ದೇವತೆಗಳಿಗೆ ಖುಷಿಯೋ ಖುಷಿ!

ಆಗ ಬಲಿ ಚಕ್ರವರ್ತಿಯು ವಾಮನನನ್ನು ಕುರಿತು 'ಸ್ವಾಮೀ! ನಾನು ಪ್ರತಿವರ್ಷ ಇದೇ ದಿನದಲ್ಲಿ ಪ್ರಜೆಗಳನ್ನು ಭೇಟಿ ಮಾಡಲು ಅವಕಾಶ ನೀಡಬೇಕು' ಎಂದು ಪ್ರಾರ್ಥಿಸಿಕೊಂಡ. ಅದಕ್ಕೆ ವಾಮನ ಒಪ್ಪಿಗೆ ನೀಡಿದ.

ಆ ಮೇರೆಗೆ ಪ್ರತಿವರ್ಷ ಜಿನಂ ತಿಂಗಳು ಅಂದರೆ ಸೆಪ್ಟೆಂಬರ್‌ನಲ್ಲಿ ಓಣಂ ಹಬ್ಬದ ಹತ್ತು ದಿನಗಳು ಬಲಿ ಚಕ್ರವರ್ತಿ ಕೇರಳದಲ್ಲಿರುತ್ತಾನೆ ಎಂದು ನಂಬಿಗೆ. ಆತನ ಸಲುವಾಗಿಯೇ ಓಣಂ ಹಬ್ಬ. ಹತ್ತು ದಿನಗಳು ಸಡಗರದಲ್ಲಿ ಕಳೆಯುತ್ತವೆ. ಕೊನೆಯ ದಿನ ಓಣಂ.

ನಮ್ಮ ರಾಜ್ಯ ನೋಡಲು ಬರಲಿರುವ ಬಲಿ ಚಕ್ರವರ್ತಿಯು ಸಂತುಷ್ಟನಾಗಲೆಂದು ಹಣ್ಣು ಹೂ ಮತ್ತು ಕಾಯಿ ಪಲ್ಲೆಗಳ ಪ್ರದರ್ಶನ ಮಾಡಿ, ಮನೆ ಮನೆಯಲ್ಲೂ ಮುಂಭಾಗದ

ಹಜಾರದಲ್ಲಿ ವಿವಿದ ಪುಷ್ಪಗಳಿಂದ ಹಸೆ ಹಾಕಿ ಸ್ವಾಗತ ನೀಡುವುದು ವಾಡಿಕೆ. ಮನೆ ಮನೆಯ ಹೆಂಗಸರು ಶೃಂಗಾರದಲ್ಲಿ ಎಂತಹ ಪೈಪೋಟಿ ನಡೆಸುತ್ತಾರೆ ಗೊತ್ತೆ? ಕೇಳು, ಮೀರಾ! ನೀನು ಈ ಸಲ ತುಂಬಾ ಚೆನ್ನಾದ ಹೂವಿನ ಹಸೆ ತಯಾರಿಸಬೇಕು!'

'ಆಗಲಿ ಅಮ್ಮಾ! ಗೆಳತಿಗೆ ಬರ ಹೇಳುವೆ!'

'ಈ ಹಬ್ಬ ಎಷ್ಟು ಚೆನ್ನ! ಪುರ ಶೃಂಗಾರ. ಮಕ್ಕಳ ಶೃಂಗಾರ. ಹಿರಿಯರ ಶೃಂಗಾರ. ದೋಣಿ ಸ್ಪರ್ಧೆ! ಓಹ್! ಎಲ್ಲಾ ಬಲು ಚೆನ್ನ ಮಗಳೇ!'

ತಾಯಿಯ ವಿವರಣೆ ಮನವನ್ನು ಮುಟ್ಟಿತು. ಮೀರಾ ಆನಂದ ಭರಿತಳಾದಳು.

ಮೀರಾ ತಾಯಿಯೊಂದಿಗೆ ಹಜಾರದಲ್ಲಿ ನೆಲದ ಮೇಲೆ ಹೂ ಹಸೆಯನ್ನು ಬಿಡಿಸುವುದರಲ್ಲಿ ಪಾಲ್ಗೊಂಡಳು. ಬಗೆ ಬಗೆಯ ಹೂಗಳಿಂದ ಹೊಂದಿಸಿದ ಹಸೆ ಬಲು ಅಂದವಾಗಿ ಮೈಗೂಡಿಕೊಂಡಿತು. ಅಹಾ! ನೋಡಲು ಎಷ್ಟು ಚೆಂದ! ಒಂದೇ? ಎರಡೇ? ಹತ್ತಾರು ಬಗೆಯ ಹೂಗಳ ಸುಂದರ ಕೂಟ. ರತ್ನಗಂಬಳಿಯಂತೆ ಉದ್ದಗಲದ ಹಸೆ!

'ಅಮ್ಮಾ! ಈ ಹೂವು ಇಲ್ಲಿದ್ದರೆ ಹೇಗೆ?'

'ಮೀರಾ! ನೀನು ಹೇಳಿದ್ದು ಸರಿ. ಅಲ್ಲಿಯೇ ಇಡು.'

'ಅಮ್ಮಾ! ಬಲಿ ಚಕ್ರವರ್ತಿ ಬರುವುದು ರಾತ್ರಿಯೋ? ಹಗಲೋ?'

ಮಗಳ ಮುದ್ದು ಪ್ರಶ್ನೆಗೆ ಉತ್ತರಿಸಿದಳು ತಾಯಿ.

'ಹಾಂ! ರಾತ್ರಿ ಹೊತ್ತು ದೇಶ ಸಂಚಾರ ಮಾಡುತ್ತಾನಂತೆ! ಅವನನ್ನು ಸ್ವಾಗತಿಸುವ ಸಲುವಾಗಿ ಎಷ್ಟೆಷ್ಟು ಕಾಲದಿಂದ ಈ ಹಬ್ಬದಾಚರಣೆ ನಡೆಯುತ್ತಿದೆ ನೋಡು!'

'ಹೀಗೆ ಮನೆ ಮನೆಯೂ ಅಲಂಕಾರ ಹೊಂದುವುದನ್ನು ನೋಡಿದರೆ ಆಶ್ಚರ್ಯ! ಅವನು ಮನೆ ಮನೆಗೂ ಬರುತ್ತಾನೆಯೇ?'

'ಇಲ್ಲಿ ಕೇಳು! ಇದಕ್ಕೊಂದು ಕತೆ ಹೇಳುವೆ. ನಮ್ಮಲ್ಲೇ ನಡೆದದ್ದು ಇದು. ನಮ್ಮ ತಾತ ರಾತ್ರಿ ಹನ್ನೊಂದರ ಸಮಯದಲ್ಲಿ ಮುಂದಿನ ಜಗಲಿಯಲ್ಲಿ ಕುಳಿತಿದ್ದರಂತೆ. ಓಣಂ ರಾತ್ರಿ ಹಬ್ಬ ಮುಗಿದಿದೆ. ಮೈ ಮನಸ್ಸುಗಳಿಗೆ ಉಲ್ಲಾಸ ತುಂಬಿತ್ತು. ಭಕ್ತಿ ಭಾವದಿಂದ ಕಣ್ಮುಚ್ಚಿ ಕುಳಿತಿದ್ದಾರೆ. ಸ್ವಲ್ಪ ಹೊತ್ತಿನ ನಂತರ ಭರ್ರನೆ ಜೋರಾಗಿ ಬೀಸಿತು ಗಾಳಿ. ಹಿಂದೆಯೇ ಬಿಳಿಯ ಮಂಜಿನಂತೆ ಯಾರೋ ಒಳಗೆ ಬಂದ ಅನುಭವ. ಮರುಗಳಿಗೆಯಲ್ಲಿ ಹಾಗೆಯೇ ಹೊರ ಹೋದ ಸಣ್ಣ ಸದ್ದು. ತಂಗಾಳಿ ಸುಯ್ಯನೆ ಸುಯ್ದು ಹೋದಂತಹ ಅನಿಸಿಗೆ. ಒಡನೆ ತಾತ ಒಳ ಬಂದು ನೋಡುತ್ತಾರೆ, ಇಂಥ ಹೂ ಹಸೆ ಅಲ್ಲಾಡಿ ಹೋಗಿದೆ! ಯಾರೋ ತುಳಿದಾಡಿದಂತೆ! ಹಾಂ! ಇದಕ್ಕೇನು ಹೇಳುತ್ತಿ!'

ಮಗಳು ತಾಯಿ ಮಾತು ಕೇಳಿ 'ನಿಜವಾಗಿಯೂ?' ಎಂದಳು.

'ನಿಜ. ನೀನು ಈಗ ಹೇಗೆ ಆಶ್ಚರ್ಯಪಟ್ಟೆಯೋ ಹಾಗೆಯೇ

ತಾತನಿಗೂ ಕೂಡ. ಇಲ್ಲಿ ಕೇಳು! ಆ ಕಾಲದಲ್ಲಿ ದೇವರು ಎಂದರೆ ಎಂತಹ ಭಕ್ತಿ? ಹಬ್ಬ ಎಂದರೆ ಎಷ್ಟು ಶ್ರದ್ಧೆ? ಈಗ ಇವೆಲ್ಲಾ ತುಂಬಾ ಸಾಮಾನ್ಯ. ಮಕ್ಕಳಾಟದಂತೆ ಹಬ್ಬ ನಡೆದು ಹೋಗುತ್ತದೆ.'

ಆ ವಿಚಾರ ಎಳೆಯ ಮನದಲ್ಲಿ ಯೋಚನೆ ಮೂಡಿಸಿತು. ನಾವೂ ಅಷ್ಟೇ ಶ್ರದ್ಧೆ ಭಕ್ತಿಗಳಿಂದ ಪೂಜಿಸಿದರೆ ಬಂದಾನೇನೋ ಬಲಿ ಚಕ್ರವರ್ತಿ? ಅವನು ಬರುವುದಾದರೆ ಪೂಜಿಸುವುದೇನು ಕಷ್ಟ? ನಾವು ಭಕ್ತಿಯಿಂದ ಪೂಜಿಸಲೇ ಬೇಕು!

ಹಾಗೆಂದು ಕೊಂಡಾಗಲೇ ತಲೆ ಬಾಗಿಲ ಕರೆಗಂಟೆ 'ಕುಕೂ, ಕುಕೂ' ಎಂದು ಮೈನಾ ಹಕ್ಕಿಯಂತೆ ಕರೆ ನೀಡಿತು. ಮೀರಾ ಕದ ತೆರೆದರೆ ಬಂದವಳು ತನ್ನ ಶಾಲಾ ಗೆಳತಿ ರಾಗಿಣಿ.

'ಬಾ ರಾಗಿಣಿ! ನೀನು ಬರದೆ ಎಷ್ಟು ದಿನಗಳಾಗಿತ್ತು!'

'ಅದಕ್ಕೇ ಬಂದುದು.'

'ಸಂತೋಷ!'

ಕೈ ಹಿಡಿದು ಬರಮಾಡಿಕೊಂಡಳು ಮೀರಾ. ಅವರಿಬ್ಬರೂ ಕೂಡಿ ಸಂತಸದಿಂದ ಹಬ್ಬದ ತಯಾರಿಕೆಯಲ್ಲಿ ಮನವಿಟ್ಟರು. ಅವಳು ಎಲ್ಲಾ ಮುಗಿಸಿ ಮನೆಯ ಕಡೆ ಹೊರಟಾಗ ಮೀರಾ ಹೇಳಿದಳು.

'ನೀನು ಓಣಂ ರಾತ್ರಿಯನ್ನು ಇಲ್ಲಿಯೇ ಕಳೆಯಬೇಕು ತಿಳಿಯಿತೇ?'

'ಆಗಲಿ ಬರುವೆ.'

ಅವಳು ಒಪ್ಪಿಗೆ ಸೂಸಿ ಹೊರಟಳು.

ಆ ಹತ್ತು ದಿನಗಳು ಸಡಗರದಿಂದ ಕಳೆದುಹೋದುವು. ಓಣಂ ಹಬ್ಬದಲ್ಲಿ ಹೊತ್ತು ಕಳೆದುದೇ ತಿಳಿಯದಷ್ಟು ಸಂಭ್ರಮ.

ಅಂದು ಸಾಯಂಕಾಲವೇ ಮೀರಳೊಂದಿಗೆ ಉಳಿಯಲು ಬಂದಳು ರಾಗಿಣಿ. ರಾತ್ರಿಯ ಔತಣ ಮುಗಿದನಂತರ ಇಬ್ಬರೂ ಮುಂದಿನ ಕೊಠಡಿಯಲ್ಲಿ ಉಳಿದರು. ತೆರೆದ ಕಿಟಕಿಯಿಂದ ಬೀದಿಯಲ್ಲಿ ಓಡಾಡುವ ಜನ ಮತ್ತು ವಾಹನ ಕಾಣಿಸುತ್ತಿದ್ದುವು.

ಹೊತ್ತು ಮೀರುತಿದ್ದಂತೆ ಎಲ್ಲವೂ ಕಣ್ಮರೆಯಾದುವು. ಸದ್ದು-ಗದ್ದಲ ಅಡಗಿತು. ಮನೆ ಮನೆಗಳ ದೀಪ ನಂದಿದುವು.

'ಈ ದಿನ ಬಲಿ ಚಕ್ರವರ್ತಿ ರಾಜ್ಯ ಪರಿಶೀಲನೆಗಾಗಿ ಬಂದೇ ಬರುತ್ತಾನೆ. ನೋಡೋಣ....ನಾವು ಈಗಲೇ ನಿದ್ದೆ ಮಾಡಬಾರದು' ಎಂದಳು ಮೀರಾ.

'ಮೀರಾ! ನಿನ್ನ ಮಾತಿಗೆ ಏನೆನ್ನೋಣ?'

ಟಕ್ಕ. ಟಕ್ಕ. ಟಕ್ಕ. ಟಕ್ಕ.

ಓ ಅದಾವ ಸದ್ದು? ಇಬ್ಬರೂ ಕಿಟಕಿಯ ಕಡೆ ತೆಕ್ಕನೆ ನೋಡಿದರು. ರಾತ್ರಿ ಡ್ಯೂಟಿಯ ಪೋಲೀಸ್ ರಸ್ತೆಯಲ್ಲಿ ಹಾದು ಹೋದ. ಟಕ್ಕ. ಟಕ್ಕ. ಟಕ್ಕ. ಟಕ್ಕ.

'ಓ! ಅವನೇ ಬಲಿ ಚಕ್ರವರ್ತಿ!' ಮೀರಾ ಗೆಳತಿಯೊಡನೆ ಕಿಲಕಿಲ ನಕ್ಕಳು.

‘ಹಾಂ! ಕಲಿಕಾಲದ ಬಲಿ ಚಕ್ರವರ್ತಿ!’

ಮಿತವಚನ ಬಲು ಹಿತವಚನ
ಮಿತಾಹಾರ ಹಿತಾಚಾರ
ರೀತಿ, ನೀತಿ, ಸತ್ಯ, ಧರ್ಮ
ನ್ಯಾಯ, ನಿಷ್ಠೆ, ಸದಾಚಾರ
ಮಕ್ಕಳ ಸ್ವಚ್ಛ ಬದುಕಿಗೆ
ಅಳವಡಿಸಲದುವೆ ಸಗ್ಗಸಿರಿ
ಹೆತ್ತವರ ಸಿರಿ ಬದುಕಿಗೆ.

ಕ್ರಿಕೋರಿ

ಒಕಾಸಾಕಿಯಲ್ಲಿ ಕ್ರಿಕೋರಿ ಎಂಬ ಶಾಲಾ ಬಾಲಕನಿದ್ದ.

ಅವನು ತುಂಬಾ ಉತ್ಸಾಹ ಮತ್ತು ಚುರುಕು ಸ್ವಭಾವದ ವಿದ್ಯಾರ್ಥಿ. ಆದರೆ ಬಡತನದಿಂದ ಅವನ ಪ್ರಗತಿಗೆ ಎಳ್ಳು ನೀರು. ಪುಸ್ತಕ ಕೊಳ್ಳಲು ಹಣವಿರಲಿಲ್ಲ. ವಿದ್ಯಾಭ್ಯಾಸವನ್ನು ಕೈ ಬಿಡುವ ಪ್ರಸಂಗ ತಲೆದೋರಿ ಹುಡುಗ ಖಿನ್ನನಾದ. ಅವನ ತಂದೆಗೆ ಫಲವತ್ತಾದ ಜಮೀನಿತ್ತು. ಕಷ್ಟಪಟ್ಟು ಬೆವರಿಳಿಸಿ ವ್ಯವಸಾಯ ಮಾಡುತ್ತಿದ್ದ. ಆದರೆ ಬಂದ ಬೆಳೆಯೆಲ್ಲಾ ಕಳ್ಳರ ಪಾಲು. ಕಳ್ಳರು ಬಹುಸಂಖ್ಯೆಯಲ್ಲಿದ್ದುದರಿಂದ ರಾತ್ರಿ ಕಾವಲು ಕಾಯುವುದು ಪ್ರಾಣಕ್ಕೆ ಅಪಾಯ. ಕಷ್ಟ ಪಟ್ಟರೂ ದಕ್ಕದ ಬೆಳೆಯಿಂದ ಸಂಕಟ-ವ್ಯಸನಗಳಿಗೊಳಗಾಗಿದ್ದ ಬಡ ರೈತ. ಒಪ್ಪತ್ತೂಟ ಮಾಡಿ ಶಾಲೆಗೆ ಹೋಗುತಿದ್ದ ಕ್ರಿಕೋರಿಗೆ ಓದಿನಲ್ಲಿ ಸರಿಯಾಗಿ ಗಮನ ಕೊಡುವುದೂ ಕಷ್ಟವೇ.

ಓ ಫೆರ್ರಿ ಕ್ರಿಕೋರಿಯ ತರಗತಿಯಲ್ಲೇ ಓದುವ ಬಾಲಕ. ಅವನ ತಂದೆ ಯಾವ ಕೆಲಸ ಮಾಡದಿದ್ದರೂ ಓ ಫೆರ್ರಿ ತುಂಬ ಹಣಗಾರನಾಗಿದ್ದ. ಬೆಲೆ ಬಾಳುವ ಬಟ್ಟೆ ತೊಟ್ಟು ಠೀವಿಯಿಂದ

ಹಣವನ್ನು ನೀರಿನಂತೆ ಖರ್ಚುಮಾಡುತಿದ್ದ. ಒಮ್ಮೆ ಕ್ರಿಕೋರಿ ಆ ವಿಷಯುವನ್ನು ಮನದಲ್ಲೇ ಮೆಲುಕು ಹಾಕಿ ಅವನನ್ನು ಕೇಳಿದ 'ಓ ಫೆರ್ರಿ! ನಿನ್ನ ತಂದೆ ಯಾವ ಕೆಲಸ ಮಾಡುತ್ತಾರೆ?'

ಓ ಫೆರ್ರಿ ಆ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. ಸ್ವಲ್ಪ ತಬ್ಬಿಬ್ಬಾದ. ತಕ್ಷಣ ಏನು ಹೇಳಲೂ ತೋಚಲಿಲ್ಲ.

'ಹಾಂ! ನಿಮಗೆ ಜಮೀನಂತೂ ಇಲ್ಲ ಅಲ್ಲವೇ?'

'ಜಮೀನಿಲ್ಲ; ನಿಜ. ನನ್ನ ತಂದೆ ಏನೇನೋ ವ್ಯಾಪಾರ ಮಾಡುತ್ತಿರಬಹುದು....'

'ನಿನ್ನದೇ ಸುಖ. ನಮಗೆ ಜಮೀನಿದ್ದರೆ ಬಡತನ ತಪ್ಪದು.'

ಓ ಫೆರ್ರಿಯ ಮುಖ ಬಣ್ಣಗೆಟ್ಟಿತು. ಏನೋ ಹೇಳಲು ಪ್ರಯತ್ನಿಸಿ ಸುಮ್ಮನಾದ.

ಕ್ರಿಕೋರಿ ಗೆಳೆಯನ ಘಣಗಾರಿಕೆಯ ಗುಟ್ಟನ್ನು ಹೇಗಾದರೂ ತಿಳಿದುಕೊಳ್ಳಬೇಕೆಂದು ಮನದಲ್ಲೇ ಯೋಚಿಸಿ ಸುಮ್ಮನಾದ.

★ ★ ★

ಅಂದು ಭಾನುವಾರ; ಶಾಲೆಗೆ ರಜೆ.

ಕ್ರಿಕೋರಿ ತೋಟದ ಕಡೆ ಹೋದ. ಚೆನ್ನಾಗಿ ಬೆಳೆದ ಬೆಳೆ. ಮುಂದೆರಡು ವಾರಗಳಲ್ಲಿ ಕೊಯ್ಲಿಗೆ ಬರುತ್ತದೆ. ಅಲ್ಲಿಯ ತನಕ ಬಿಟ್ಟರೆ ಬೆಳೆ ಕಳ್ಳರ ಪಾಲು. ಈಗಲೇ ಕಿತ್ತರೆ ಬೆಳೆ ನಷ್ಟ. ಬಾದಾಮಿ ಹಣ್ಣೊಂದನ್ನು ಕೊಯ್ದು ಬಾಯಿಗಿಟ್ಟ. ಹಣ್ಣು ಮಾಗಿರದೆ ಮುಖಭಾವ ಒಗರಾಯಿತು. ಹೊಟ್ಟೆಯಲ್ಲಿ ಹಸಿವಿದ್ದರೂ

ತಿನ್ನಲಾರದ ಹಣ್ಣು. ಬಂಗಾರದಂತಹ ಬೆಳೆ ಕಂಡವರ ಪಾಲು ಎನಿಸಿ ದುಃಖ ಒತ್ತರಿಸಿ ಬಂತು. ಎರಡೂ ಕಣ್ಣುಗಳಲ್ಲಿ ನೀರು ಧಾರೆಧಾರೆಯಾಗಿಳಿಯಿತು. ಅದೇ ವೇಳೆಗೆ ಒಬ್ಬ ಮುದುಕಿ ಅಲ್ಲಿಗೆ ಬಂದಳು. ಹುಡುಗನ ದುಃಖದಿಂದ ಮನ ಕರಗಿತು. ಆಕೆ ನಲ್ಮೆಯಿಂದ ಕೇಳಿದಳು 'ಏಕೆ ಅಳುತ್ತಿ ಮಗೂ?'

ಬಾಲಕ ತನ್ನ ಕಷ್ಟವನ್ನು ದುಃಖದಿಂದ ಹೇಳಿಕೊಂಡ.

'ಮಗೂ! ಇದಕ್ಕೊಂದು ಪರಿಹಾರ ನನ್ನಲ್ಲುಂಟು. ನಾನು ನಿನಗೆ ಖಂಡಿತ ಸಹಾಯ ಮಾಡುವೆ. ಅನಂತರ ನೀನು ನನಗೊಂದು ಉಪಕಾರ ಮಾಡಬೇಕು, ಆಯಿತೇ? ಇದಕ್ಕೇನು ಹೇಳುತ್ತಿ?'

'ಆಗಲಿ ಅಜ್ಜೀ! ನೀವು ಏನು ಹೇಳಿದರೂ ಮಾಡುವೆ.'

ಅವಳು ಒಂದೆರಡು ಗಳಿಗೆ ಯೋಚಿಸಿ ನುಡಿದಳು 'ಕೇಳು ಮಗೂ? ನಿನ್ನನ್ನು ನೋಡಿದರೆ ತುಂಬ ಒಳ್ಳೆಯವನಾಗಿ ಕಾಣುತ್ತಿ. ನಿನ್ನ ಸೌಮ್ಯರೂಪ ಮತ್ತು ಸೌಮ್ಯಭಾವ ನನಗೆ ತುಂಬಾ ಮೆಚ್ಚಿಗೆಯಾಗಿದೆ. ನಿನ್ನನ್ನು ಸಂಪೂರ್ಣ ನಂಬಿ ಉಪಕಾರ ಮಾಡುವೆ. ಮುಂದೆ ನೀನು ನನ್ನನ್ನು ಮರೆಯಬಾರದು ತಿಳಿಯಿತೇ?'

'ಆಗಲಿ ಅಜ್ಜಿ....ಉಪಕಾರ ಮಾಡಿದವರನ್ನು ಮರೆಯುವವನಲ್ಲ ನಾನು.'

ಅವನ ಮುಖಭಾವ ಮೃದು ಮಾತುಗಳು ಬಲು ಪ್ರಿಯವಾಗಿ

ತೋರಿತು ಅಜ್ಜಿಗೆ. ಅವನನ್ನು ಪ್ರೇಮದಿಂದ ಆಲಂಗಿಸಿಕೊಂಡು ಮಗೂ! ನೀನು ಖಂಡಿತ ಚಿಂತೆ ಮಾಡಬೇಡ. ನನ್ನ ಬಳಿ ಒಂದು ಮಂತ್ರದ ಶಂಖವಿದೆ. ಒಸಾಕಿ ದೇವತೆಯನ್ನು ಸ್ಮರಿಸಿ ಅದನ್ನು ಊದಿದರೆ ಅದರಿಂದ ಒಂದು ಭೂತ ಗುಲಾಮ ಹೊರಬರುತ್ತದೆ. ಅದು ನಿನಗೆ ಬೇಕು ಬೇಕಾದ ಅಗತ್ಯಗಳನ್ನು ಪೂರೈಸುತ್ತದೆ. ನೀನು ಜಾಣನಾದರೆ ಎಲ್ಲಾ ಕಷ್ಟದಿಂದಲೂ ಪಾರಾಗುತ್ತಿ.'

'ಆಗಲಿ, ಅಜ್ಜೀ! ನಿನ್ನ ಉಪಕಾರವನ್ನೆಂದೂ ನಾನು ಮರೆಯುವುದಿಲ್ಲ.'

ಅಜ್ಜಿ ಶಂಖವೊಂದನ್ನು ಅವನ ಕೈಗೆ ಕೊಟ್ಟು ನುಡಿದಳು ನಾನು ಇನ್ನು ಮೂರು ದಿನಗಳಲ್ಲಿ ಹಿಂದಿರುಗಿ ಬರುವೆ. ಅನಂತರ ನನಗೆ ನಿನ್ನ ಜಾಣ್ಮೆಯ ಅರಿವಾಗುತ್ತದೆ.'

ಕ್ರಿಕೋರಿ ತಲೆಯಾಡಿಸಿ ಸಂತಸದಿಂದ ಬೀಳ್ಕೊಟ್ಟ.

★ ★ ★

ಕ್ರಿಕೋರಿ ಕೊಳದಲ್ಲಿ ಕೈಕಾಲುಮುಖ ತೊಳೆದುಕೊಂಡು ಒಸಾಕಿ ದೇವತೆಯನ್ನು ಮನದಲ್ಲಿ ಸ್ಮರಿಸಿ ಶಂಖ ಊದಿದ. ಅದರಿಂದ ಶಬ್ದ ಹೊರಡುವುದಕ್ಕೆ ಬದಲಾಗಿ ಮಂಜಿನ ಬೊಂಬೆಯಂತಹ ಭೂತ ಹೊರ ಬಂದು ಕೈ ಮುಗಿದುಕೊಂಡು ಏನಪ್ಪಣೆ?' ಎಂದಿತು.

ಅದರ ದರ್ಶನ ಮಾತ್ರದಿಂದ ಹುಡುಗ ಬೆಚ್ಚಿದ; ಮೈ ನಡುಗಿತು; ಮನಸ್ಸು ತಲ್ಲಣಿಸಿತು. ಪ್ರಯತ್ನಿಸಿದರೂ ಬಾಯಿಂದ

ಮಾತು ಹೊರಡಲಿಲ್ಲ.

ಭೂತ ಬಾಲಕನ ಸ್ಥಿತಿಯನ್ನು ನೋಡಿ ಮಧುರ ಭಾವದಿಂದ ಹೇಳಿತು 'ಅಯ್ಯಾ, ಬಾಲಕ! ನೀನು ಹೆದರುವ ಕಾರಣವಿಲ್ಲ. ಈ ಶಂಖ ಯಾರ ಬಳಿ ಇರುತ್ತದೊ ಅವರ ದಾಸ ನಾನು. ನಿನಗೇನು ಬೇಕೋ ಹೇಳು ನಾನದನ್ನು ಪೂರೈಸುವೆ.'

ಅದರ ಮಾತಿನಿಂದ ಬಾಲಕ ಕೆಲವು ನಿಮಿಷಗಳಲ್ಲಿ ತನ್ನನ್ನು ತಾನು ಸುಧಾರಿಸಿಕೊಂಡು ಯೋಚಿಸಿದ. ಆ ಗಳಿಗೆಯಲ್ಲಿ ಅವನ ಅಗತ್ಯವೆಂದರೆ ಊ....ಟ. ಹಸಿವು-ಹಸಿವು. ತಾಳಲಾಗದ ಹಸಿವು. ಒಂದೇ ಉಸಿರಿಗೆ ನುಡಿದ 'ನನಗೆ ತುಂಬಾ ಹಸಿವು. ಊಟ ಬೇಕು. ಎಲ್ಲಿಂದಲಾದರೂ ತಂದುಕೊಡು.'

ಅಷ್ಟು ಹೇಳಬೇಕಾದರೂ ಸಾಕು ಬೇಕಾಗಿ ಮೈ ಬೆವರಿತು. ಅದು ಕಣ್ಮರೆಯಾದರೆ ಸಾಕು ಎಂಬ ಭಯವೂ ಇಲ್ಲದಿರಲಿಲ್ಲ. ಒಂದೆರಡು ಕ್ಷಣದಲ್ಲಿಯೇ ಭೂತ ಕಣ್ಮರೆಯಾಯಿತು. ಹುಡುಗ ಅದು ಮೂಡಿ ಮಾಯವಾದುದನ್ನು ಯೋಚಿಸುತ್ತ 'ಎಂತಹ ಆಶ್ಚರ್ಯ!' ಎಂದುಕೊಳ್ಳುತಿದ್ದಾಗಲೇ ಭೂತ ಒಂದು ಮೂಟೆಯೊಡನೆ ಬಂದಿಳಿಯಿತು!

'ಎಲಾ ಭೂತ! ಎಷ್ಟು ಬೇಗ ಸಂಪಾದಿಸಿದೆ!'

'ಇದೆಷ್ಟೊತ್ತಿನ ಕೆಲಸ? ಇಗೊ, ನಿನಗೆ ಬೇಕು ಬೇಕಾದ ಊಟ ತಂದಿರುವೆ!'

ಭೂತ ಗಂಟು ಬಿಚ್ಚಿತು....ಹುಡುಗ ಅರಳುಗಣ್ಣಿಂದ

ನೋಡುತ್ತಾನೆ, ಪೂರಿಪಲ್ಯಗಳ ರಸದೌತಣವೇ ಇದೆ! ಎಂತಹ ಆಶ್ಚರ್ಯ! ಎಲ್ಲಿಂದ ತಂದಿತು ಇದನ್ನೆಲ್ಲಾ??

ಭೂತ ಸಾವಧಾನದಿಂದ ಕೈ ಮುಗಿದುಕೊಂಡು 'ಏನಪ್ಪಣೆ?' ಎಂದಿತು.

ಆಗ ಕ್ರಿಕೋರಿ ಹೆದರಿಕೊಳ್ಳದೆ 'ಏನಪ್ಪಣೆ ಎನ್ನುತಿದ್ದೀಯೆ? ನೀನು ಎಷ್ಟೆಲ್ಲಾ ಮಾಡಬಲ್ಲೆ?' ಎಂದ. ಮುಖ ಅರಳು ಮೊಗ್ಗೆಯಾಯಿತು.

'ನೀನು ಏನು ಹೇಳಿದರೂ ಮಾಡಬಲ್ಲೆ.'

'ಹಾಂ! ನಮಗೆ ವಾಸಕ್ಕೆ ಮನೆ ಬೇಕು. ಕಟ್ಟಿಕೊಡಬಲ್ಲೆಯಾ?'

'ಓಹೋ!' ತಟ್ಟನೆ ಕೇಳಿತು ಆ ಭೂತ ಎಂತಹ ಮನೆ ಬೇಕು? ಅರಮನೆಯೋ ಸಾಧಾರಣ ಮನೆಯೋ?'

'ನಮಗೇಕಪ್ಪಾ ಅರಮನೆ? ಸಾಧಾರಣ ಮನೆಯಿದ್ದರೆ ಸಾಕು.'

ಭೂತ ಆ ಕ್ಷಣವೇ ನಿರ್ಗಮಿಸಿತು. ಕೆಲವು ಗಳಿಗೆಯೊಳಗಾಗಿ ಪುನಃ ಅದು ಪ್ರತ್ಯಕ್ಷ!

ಅರೆ! ಎಂತಹ ಚುರುಕು!! ಇದು ಅಸಾಮಾನ್ಯ!!

ಅದು ಪುನಃ 'ಏನಪ್ಪಣೆ?' ಎಂದಿತು.

ಸಲ ಸಲವೂ ಅದಕ್ಕೆ ಕೆಲಸ ಹೇಳುವುದಾದರೂ ಏನು? ಯೋಚನೆಯಲೆಗಳು ತಟ್ಟನೆ ತಬ್ಬಿಬ್ಬಾದುವು. ತಕ್ಷಣವೇ 'ಈಗೇನೂ ಕೆಲಸವಿಲ್ಲ ಹೋಗು!' ಎಂದು ಬಿಟ್ಟ. ಅವನಿಗೆ

ಶಂಖವನ್ನು ಊದಿ ಬರಮಾಡಿಕೊಳ್ಳುವುದು ತಿಳಿದಿತ್ತೇ ವಿನಾ ಅದನ್ನು ನಿವಾರಿಸುವುದು ತಿಳಿದಿರಲಿಲ್ಲ. ಆದರೂ ಹಾಗೆನ್ನದೆ ವಿಧಿ ಇರಲಿಲ್ಲವಾದುದರಿಂದ ಹೇಳಿದ್ದ. ಆ ಕೂಡಲೇ ಅದು ಮಂಗ ಮಾಯ!

ಹುಡುಗ ಬಿಗಿ ಹಿಡಿದಿದ್ದ ಉಸಿರನ್ನೆಲ್ಲಾ ಹೊರಹಾಕಿ ಊಟದ ಗಂಟನ್ನು ಹೊತ್ತು ಮನೆಗೆ ಬಂದ. ನೋಡಿದರೆ ಎಂತಹ ಆಶ್ಚರ್ಯ! ಮೊದಲಿದ್ದ ಮುರುಕು ಮನೆಯ ತಾವಿನಲ್ಲಿ ಒಂದು ಚೊಕ್ಕವಾದ ಮನೆ ನಿಂತಿದೆ! ಒಳಗಡೆ ತಂದೆ ತಾಯಿಯರು ಮಗನ ನಿರೀಕ್ಷೆಯಲ್ಲಿದ್ದಾರೆ! ಕ್ರಿಕೋರಿ ಊಟದ ಗಂಟನ್ನು ಮುಂದಿಟ್ಟು ನಡೆದ ವಿಷಯವನ್ನು ವಿವರಿಸಿದ.

★ ★ ★

ಹಗಲು ಉರುಳಿ ರಾತ್ರಿ ಆವರಿಸಿತು.

ಕ್ರಿಕೋರಿ ಒಸಾಕಿ ದೇವತೆಯನ್ನು ಸ್ಮರಿಸಿ ಶಂಖವನ್ನು ಊದಿದ. ಆ ಕೂಡಲೇ ಭೂತ ಪ್ರತ್ಯಕ್ಷವಾಗಿ 'ಏನಪ್ಪಣೆ' ಎಂದಿತು.

'ರಾತ್ರಿ ತೋಟದ ಕಾವಲು ಕಾಯಬೇಕು.'

'ಆಗಲಿ' ಭೂತ ಹೊರಟಿತು. ಕ್ರಿಕೋರಿ ಧೈರ್ಯವಾಗಿ ಹಿಂಬಾಲಿಸಿದ. ತೋಟದ ಕಳ್ಳರು ಯಾರೆಂಬುದನ್ನು ತಿಳಿದುಕೊಳ್ಳುವ ಆಸೆಯಿತ್ತು. ಆಕಾಶದಲ್ಲಿ ಚಂದ್ರ ಪ್ರಕಾಶಿಸಿದ್ದ. ಇಳೆಯ ಮೇಲೆ ಹಾಲು ಹೊಳೆಯಂತಹ ಬೆಳದಿಂಗಳ ಧಾರೆ. ತಂಪಾದ ಗಾಳಿಯಿಂದ ತಣ್ಣನೆಯ ರಾತ್ರಿ ಇನ್ನಷ್ಟು ಮನೋಹರ.

ತೋಟದ ಮಧ್ಯಭಾಗಕ್ಕೆ ಹೋಗುತ್ತಲೂ ಭೂತ ಕೂಗು ಹಾಕಿತು. ರೈಲು ಕೂಗಿದಂತಹ ಹಿರಿಯ ಸದ್ದು ಕಾಡಿನಲ್ಲೆಲ್ಲಾ ಮೊಳಗಿತು. ಆಗ ಅಲ್ಲಿದ್ದ ಕಳ್ಳರು ಹೆದರಿ ಚೆದರಿ ಅತ್ತಿತ್ತ ಓಡತೊಡಗಿದರು. ನೋಡಿದರೆ ಅವರು ಇನ್ನಾರೂ ಅಲ್ಲ, ಓ ಫೆರ್ರಿ ಮತ್ತು ಕುಟುಂಬದವರೇ!

ಕ್ರಿಕೋರಿ ಆಶ್ಚರ್ಯದಿಂದ ಕೂಗಿದ 'ಓ ಫೆರ್ರಿ! ನೀನೇ ಕಳ್ಳನೋ!'

ಅವನು ನಾಚಿಕೆಯಿಂದ ಕುಗ್ಗಿ ಕೇಳದವನಂತೆ ಓಡಿಯೇ ಓಡಿದ!

ಮೂರನೆಯ ದಿನ ಮುದುಕಿ ಬೊಚ್ಚು ಬಾಯಿ ಆಡಿಸುತ್ತ ಮನೆಗೆ ಬಂದಳು. ಅವಳನ್ನು ಕಂಡ ಕೂಡಲೇ ಆನಂದದಿಂದ ಉಬ್ಬಿದ ಕ್ರಿಕೋರಿ ತನ್ನ ತಂದೆ ತಾಯಿಯರೊಡನೆ ಬರಮಾಡಿಕೊಂಡು ಉಪಚರಿಸಿದ.

'ನೀವೀಗ ಸುಖವಾಗಿದ್ದೀರಿ! ನನ್ನ ಶಂಖ ನಿಮ್ಮ ಸೇವೆ ಮಾಡುತ್ತಿದೆ. ಈಗ ನಿಮ್ಮಿಂದ ನನಗಾಗಬಹುದಾದ ಉಪಕಾರ ಮರೆತಿಲ್ಲವಷ್ಟೆ?' ಎಂದಳು ಮುದುಕಿ, ಬೊಚ್ಚು ಬಾಯಿ ಅಗಲಿಸಿ.

'ಖಂಡಿತ ಮರೆತಿಲ್ಲ. ಈಗ ಹೇಳಿ ನಮ್ಮಿಂದ ಏನಾಗಬೇಕು?'

'ನನಗೆ ಕುಟುಂಬಿಗರಾರೂ ಇಲ್ಲ. ಈ ಇಳಿ ವಯಸ್ಸಿನಲ್ಲಿ ಒಬ್ಬಳೇ ಬಾಳುವುದು ಕಷ್ಟ. ನನಗೆ ಕುಟುಂಬ ಭಾಗ್ಯಬೇಕು. ನೀವೊಪ್ಪಿದರೆ ನಾನೂ ನಿಮ್ಮೊಂದಿಗೆ ಉಳಿಯುವೆ.'

'ಓ ಆಗಲಿ, ತಾಯಿ! ನೀವು ನಮ್ಮ ಮನೆಗೆ ಖಂಡಿತ ಭಾಗ್ಯಲಕ್ಷ್ಮಿ! ನೀವು ಬಂದದ್ದು ತುಂಬಾ ಸಂತೋಷ! ನಿಮ್ಮ ಕಷ್ಟ-ಸುಖ ನಮ್ಮ ಮೇಲಿರಲಿ!'

ಮೂವರೂ ಒಕ್ಕೊರಲಿಂದ ಹಾಗೆಂದಾಗ ಮುದುಕಿಗಾದ ಆನಂದ ಅಷ್ಟಿಷ್ಟಲ್ಲ. ಆವಳು ಕುಟುಂಬಕ್ಕೆ ಸೇರಿಕೊಂಡು ಕ್ರಿಕೋರಿಯನ್ನು ಎದೆಗಪ್ಪಿ,

'ನೀನು ನಿಜವಾಗಿಯೂ ನನ್ನ ಮಗನೇ!' ಎಂದಳು, ಕಣ್ಣುಗಳಲ್ಲಿ ಹೊಸ ಖಳೆ ಸೂಸಿ.

ಅಂದಿನಿಂದ ಎಲ್ಲರೂ ಮುದುಕಿಯೊಂದಿಗೆ ಸುಖ ಜೀವನ ನಡೆಸಿದರು.

ಮಕ್ಕಳ ಮನ ಮುಗುದವರಳಿ
ಸತ್ ಸಂಕಲ್ಪ ಶಕ್ತಿಯಿಂದೆ
ಸದ್ ಭಾವನಾ ಶಕ್ತಿ ಮೂಡೆ
ಇಳೆಯೆ ಸಗ್ಗ ಸಾಮ್ರಾಜ್ಯವೈ
ಪೆತ್ತ ತಂದೆ ತಾಯಿಯರ್ಗೆ

ಮೋತಿ

ಮೋತಿ ಐದಾರು ತಿಂಗಳ ಕೋತಿಮರಿ.

ತಾಯಿಗೆ ಮೋತಿಯನ್ನು ಕಂಡರೆ ಬಲು ಪ್ರೀತಿ. ಅದು ಕಿರ್ ಕಿರ್ ಕಿರ್ ಎಂದು ಕಿರಿಚಾಡಿ ಹಲ್ಲು ಕಿರಿಯುತಿದ್ದರೆ ಖುಷಿಯೋ ಖುಷಿ! ಅದಕ್ಕೆ ಇನ್ನಷ್ಟು ತಿಂಡಿ, ಇನ್ನಷ್ಟು ಮುದ್ದು.

ತಾಯಿ ಮುದ್ದು ಮಾಡಿದಷ್ಟು ಮರಿಗೆ ಕುಣಿಯುವ ಹುಚ್ಚು. ತಕಥೈ ತಕಥೈ ಕುಣಿತ.

ತಾಯಿ ನಕ್ಕರೆ, ಮೋತಿಗೆ ಖುಷಿ. ಮತ್ತೆ ತಕಥೈ ಕುಣಿತ.

ತಾಯಿ ದರ್ಜಿ ಅಂಗಡಿಯಿಂದ ಒಂದು ಒಳ್ಳೆಯ ಅಂಗಿ ತಂದಿದ್ದಾಳೆ. ಅದು ರಂಗು ರಂಗಿನ ಅಂಗಿ. ಅದನ್ನು ತೊಟ್ಟರಂತೂ ಮೋತಿಯ ಚೆಂದವೇ ಚೆಂದ.

ನನ್ನ ಮಗಳು 'ಎಷ್ಟು ಮುದ್ದು' ಎಂದು ಮುದ್ದಿಸುತ್ತಿದ್ದಳು ತಾಯಿ.

ಪೇಟೆ ಸಾಲಿಗೆ ಹೋದಾಗ ಒಂದು ಕುಲಾವಿ ಕಂಡಿತು ತಾಯಿಗೆ. ಅಂಗಡಿಕಾರ ಅತ್ತಿತ್ತ ಕಣ್ಣು ಹಾಯಿಸಿದಾಗ ಆ ಕುಲಾವಿಯನ್ನು ಹಾರಿಸಿತು ತಾಯಿ. ಕೆಂಪಿನ ಕುಲಾವಿಗೆ

ಮೇಲೊಂದುಗೊಂಡೆ. ಎಳೆದು ಕಟ್ಟಲು ಗೊಂಡೆಯ ದಾರಗಳು. ಅದುವರೆಗೆ ಅಂತಹ ಕುಲಾವಿಯನ್ನು ನೋಡಿರಲಿಲ್ಲ ಮೋತಿ. ತಾಯಿ ತಲೆ ಬಾಚಿ ಕುಲಾವಿಯನ್ನು ತೊಡಿಸಿ ಎರಡೂ ಕಡೆ ಎಳೆದು ಕಟ್ಟಿತು.

ಕುತ್ತಿಗೆಯಲ್ಲಿ ಕೆಂಪು ಬಿಳುಪಿನ ಎರಡು ಗೊಂಡೆ!

ಮೋತಿ ಮುಟ್ಟಿ ಮುಟ್ಟಿ ನೋಡಿಕೊಂಡಿತು. ಉಣ್ಣೆಯ ದಾರ ಎಷ್ಟು ಮಿದು? ಹೂವಿಗಿಂತ ಮಿದು. ಎಷ್ಟು ಮುಟ್ಟಿ ನೋಡಿಕೊಂಡರೂ ಸಾಲದು ಮೋತಿಗೆ.

ತಾಯಿ ಮಗಳನ್ನು ಮುದ್ದು ಮಾಡಿ 'ತಿಂಡಿ ತರುವೆ ಇಲ್ಲಿಯೇ ಇರು' ಎಂದು ಹೇಳಿ ಹೊರಟಿತು. ತಾಯಿ ಯಾವಾಗಲೂ ಮಗಳನ್ನು ಮನೆಯಲ್ಲೇ ಹೆಚ್ಚಾಗಿ ಬಿಟ್ಟು ಹೋಗುತಿತ್ತು. ಅದು ಅಂಗಡಿಗೆ ಹೋದಾಗಲೆಲ್ಲಾ ಏಟು ತಿನ್ನುವುದು ತಪ್ಪಿದ್ದಲ್ಲ. ತಕ್ಷಣ ತಪ್ಪಿಸಿಕೊಳ್ಳುವಷ್ಟು ಬುದ್ಧಿವಂತಿಕೆ ಬಲಿಯಲಿಲ್ಲ. ಏಟು ಬಿದ್ದರೆ ಕಷ್ಟ ಎಂಬ ಚಿಂತೆ ತಾಯಿಗೆ.

ತಾಯಿ ಹೊರ ಹೋಗುತ್ತಲೂ ಮೋತಿ ಕುಲಾವಿಯನ್ನು ಮುಟ್ಟಿ ಮುಟ್ಟಿ ನೋಡಿಕೊಂಡಿತು. ಎಷ್ಟು ಮುಟ್ಟಿದರೂ ಸಾಲದು.... ಮುಟ್ಟುವಷ್ಟು ಮುಟ್ಟಿ ನೋಡಿದ ನಂತರ ಟೋಪಿಯನ್ನು ಬಿಚ್ಚಿ ಅದರ ಗೊಂಡೆಗಳ ದಾರವನ್ನು ಹಿಡಿದೆಳೆಯಿತು. ಎಳೆದಷ್ಟೂ ಎಳೆಗಳು ಹೊರಬಂದುವು. ಒಂದು. ಎರಡು. ಮೂರು. ಕಡೆಗೆ ಎಲ್ಲಾ.... ದಾರಗಳನ್ನೂ ಅದು ಕಿತ್ತು

ಕಿತ್ತು ಚೆಲ್ಲಾಪಿಲ್ಲಿ ಮಾಡಿತು.

ಕೆಲವನ್ನು ಅಗಿದು ಅಗಿದು ಉಗಿಯಿತು. ಸ್ವಲ್ಪೇ ಹೊತ್ತಿನೊಳಗಾಗಿ ಕುಲಾವಿಯ ಗತಿ ಮುಗಿಯಿತು. ಅಷ್ಟಕ್ಕೂ ಸಮಾಧಾನವಾಗಲಿಲ್ಲ ಮೋತಿಗೆ.

ಆದರ ಚೆಲ್ಲಾಟ ನಡೆಯುತ್ತಿರುವಾಗಲೇ ತಾಯಿ ಹಿಂದಿರುಗಿ ಬಂತು. ಕೈಯಲ್ಲಿ ದ್ರಾಕ್ಷಿ ಹಣ್ಣಿನ ಗೊಂಚಲು....ಮಾಗಿದ ಅವು ಎಷ್ಟು ರುಚಿ!

ಮೋತಿ ಆ ಕೂಡಲೇ ತಾಯಿಯೆಡೆಗೆ ಚಂಗನೆ ಹಾರಿತು.

'ನಿನ್ನ ಕೆಂಪು ಕುಲಾವಿ ಎಲ್ಲಿ?'

'ಇಲ್ಲೇ ಇದೆಯಲ್ಲಾ!'

'ಎಲ್ಲಿ?'

'ಆದರ ದಾರವನ್ನೆಲ್ಲಾ ಹಿರಿದು ನಿನಗೆ ಜೋಡಿಸಲು ಇಟ್ಟಿರುವೆ!'

'ಚೆನ್ನಾದ ಕುಲಾವಿ ತಂದರೆ ಹಾಳು ಮಾಡಿಧೆಯಾ?'

'ಮೊದಲು ದ್ರಾಕ್ಷಿಕೊಡು. ಅನಂತರ ಕುಲಾವಿ ವಿಚಾರ. ನನಗೆ ಬಲು ಹಸಿವು'

ತಾಯಿಗೆ ಮರಿಯ ಚೆಲ್ಲಾಟ ಹಿಡಿಸಲಿಲ್ಲ. ಸಿಟ್ಟಿನಿಂದ ದ್ರಾಕ್ಷಿಯನ್ನು ತಾನೇ ತಿಂದು ಬೀಜವನ್ನು ಉಗಿಯತು. ಆಗ ಮೋತಿಗಾದ ಕೋಪ ದುಃಖ ಅಷ್ಟಿಷ್ಟಲ್ಲ.

ಅದು ಚುಗನೆ ಕೊಂಬೆಗೆ ಹಾರಿ ನುಡಿಯಿತು 'ಈಗ ನಾನೇ ಹೋಗಿ ದ್ರಾಕ್ಷಿ ತರುವೆ!'

'ಹೋದರೆ ಏಟು ತಿನ್ನತ್ತಿ!'

'ನೀನೇಕೆ ನನಗೆ ಕೊಡಲಿಲ್ಲ?'

'ನೀನು ಮೊದಲು ಹೇಳು. ಏಕೆ ಕುಲಾವಿ ಹಾಳು ಮಾಡಿದೆ?'

'ಹಾಳು ಮಾಡಿಲ್ಲ. ದಾರ ಬಿಚ್ಚಿಟ್ಟಿರುವೆ.'

'ಏಕೆ? ಚಳಿಗಾಲಕ್ಕೆ ಎಷ್ಟು ಚೆನ್ನಾದ ಟೋಪಿ ಅದು...ಇನ್ನು ನಿನಗೆ ಟೋಪಿ ಇಲ್ಲವಲ್ಲಾ, ಏನು ಮಾಡುತ್ತಿ?'

'ಚಳಿಯಾದರೆ ನಿನ್ನ ಹೊಟ್ಟೆಯಡಿ ಬೆಚ್ಚಗೆ ಮಗಲುವೆ!'

'ಹಾಂ! ಈಗ ಹೇಳು. ಇನ್ನು ಕೆಟ್ಟ ಕೆಲಸ ಮಾಡುವುದಿಲ್ಲವಲ್ಲಾ?'

'ಖಂಡಿತಾ ಇಲ್ಲ!'

'ಇಗೋ ದ್ರಾಕ್ಷಿ!'

ಮರಿ ದ್ರಾಕ್ಷಿಯನ್ನು ತಿಂದನಂತರ ಬಾಲಯೆತ್ತಿ ಚಂಗನೆ ಮೇಲಿನ ಕೊನೆಗೆ ಹಾರಿ ಕುಳಿತು ಹೇಳಿತು 'ನೀನಿನ್ನು ಉಡುಪು ತರಲೇಬೇಡ. ಉಡುಪು ಬೇಸರ ತರುತ್ತೆ ನನಗೆ.'

'ಇನ್ನು ಮಳೆಗಾಲ, ನೀನು ಚಳಿ ತಡೆಯಲಾರೆ.'

ಮೋತಿ ತಾಯಿ ಕುಳಿತಿದ್ದ ಕೊಂಬೆಯ ಕಡೆ ನೋಡುತ್ತಾಳೆ. ಹಳದಿಯ ಪ್ಲಾಸ್ಟಿಕ್ ಚೀಲ! ತಾಯಿ ದ್ರಾಕ್ಷಿಯನ್ನು ತನಗೆ ಕಾಣಿಸದಂತೆ ಮುಚ್ಚಿಟ್ಟಿದ್ದಾಳೆ!

ಮೋತಿ ಕೂಡಲೇ ಅತ್ತ ಜಿಗಿದು ದ್ರಾಕ್ಷಿ ಚೀಲವನ್ನು ಕೈಗೆತ್ತಿಕೊಂಡಿತು.

'ಅದು ನಾಳೆಗಿರಲಿ ಮೋತಿ! ಮುಟ್ಟಬೇಡ. ಇಡು ಅಲ್ಲಿ!'

ಗದರಿಸಿತು ತಾಯಿ.

ಆದರೆ, ಮೋತಿ ಕೇಳಬೇಕಲ್ಲ; ಗಬಗಬನೆ ತಿಂದು ಕೀಲವನ್ನು ಕೆಳಗೆಸೆಯಿತು.

'ಇನ್ನು ನಿನಗೆ ಹಣ್ಣು ತಂದರೆ ಕೇಳು!'

'ನೀನು ತರದಿದ್ದರೆ ನಾನು ಬಿಟ್ಟೇನೆಯೇ?'

'ಏನು ಮಾಡುತ್ತೀ?'

'ಇದೋ ನೋಡು!'

ಮೋತಿ ಓಡಿ ಬಂದು ತಾಯಿಯನ್ನು ಬಿಗಿದಪ್ಪಿತು. ಕೊರಳು ಂಸುಕಿ ಹಿಡಿದರೆ ತಾಯಿಗೆ ಬಿಡಿಸಿಕೊಳ್ಳಲಾರದಷ್ಟು ಬಿಗಿಯಾದ ಂಡಿತ. ತಾಯಿ ಕೈ ಕಿತ್ತು ಹಿಡಿದರೂ ಬಿಡಿಸಿಕೊಳ್ಳಲಾಗಲಿಲ್ಲ. ಉಸಿರಾಡುವುದೇ ಕಷ್ಟವಾಯಿತು.

'ಬಿಡು ಮೋತಿ.....!' ಕೂಗಿಕೊಂಡಿತು ತಾಯಿ.

'ನನಗೆ ಹಣ್ಣು ತಂದು ಕೊಡುತ್ತೀತಾನೇ?'

'ಹಾಂ.....ಹಾಂ!'

ಮೋತಿ ತಾಯಿಯ ಕೊರಳನ್ನು ಬಿಟ್ಟು ಒಡಲನ್ನಪ್ಪಿ ಬೆಚ್ಚಗೆ ಮಲಗಿತು.

ವಿಶೇಷ ಸುದ್ದಿ

ಮಳೆಗಾಲ ಕಳೆದು ಚಳಿಗಾಲ ಪ್ರಾರಂಭದ ಸಮಯ.

ಆಗಲೇ ಅದೆಂತಹ ಚಳಿ? ಮೈ ಕೈ ಕೊರೆತ ಇರಲಿ, ಕರುಳು ಕೊರೆಯುವಂತಹ ಚಳಿಗಾಳಿ.....ಹಿಮಪಾತ. ಹೊತ್ತೇರಿದರೂ ಚಳಿ ಹರಿಯದು.

ಬಾನಕ್ಕಿಗಳು ಗಿಡ ಮರಗಳ ಮೇಲೆ ಮೈ ಮುದುಡಿ ಕುಳಿತು ದಕ್ಷಿಣದ ಕಡೆಗೆ ಹಾರಿ ಹೋಗುವ ವಿಚಾರ ಕುರಿತು ಚರ್ಚಿಸ ತೊಡಗಿದುವು. ಸ್ವಲ್ಪ ಹೊತ್ತು ಚರ್ಚೆ ಮುಂದುವರಿಯಿತು. ಆದರೇನು? ಎಷ್ಟೆಷ್ಟು ವಿಧದಲ್ಲಿ ಕ್ವಾ ಕ್ವಾ, ಕೀಂ ಕೀಂ, ಚೀಂ ಚೀಂ, ಪೀಂ ಪೀಂ ಹೀಗೆ ಯಾವಯಾವ ದನಿ ಹೊರಟರೂ ವಿಷಯ ಒಂದೇ. ಕಿವಿ ಚಿಟ್ಟು ಹಿಡಿಸುವಷ್ಟು ಗದ್ದಲ. ಕಟ್ಟ ಕಡೆಗೆ ಮರುದಿನವೇ ಎಲ್ಲರೂ ಒಟ್ಟಾಗಿ ಹೊರಡುವುದೆಂದು ನಿರ್ಣಯಿಸಿದುವು.

ಪಕ್ಷಿವರ್ಗದ ನಿರ್ಣಯವನ್ನು ಕೇಳಿ ತಿಳಿದ ಕೋಳಿಗಳಿಗೆ ನಾವೂ ಅವರೊಂದಿಗೆ ದಕ್ಷಿಣ ವಲಯಕ್ಕೆ ಹೋಗಬಾರದೇಕೆ ಎಂಬ ಯೋಚನೆ. ಒಂದು ಕೋಳಿ ರೆಕ್ಕೆಯನ್ನು ಬಡಿದು ತಲೆಯೆತ್ತಿ

ನೋಡುತ್ತ 'ನಿಮ್ಮೊಂದಿಗೆ ನಾವು ಬರಬಹುದೇ?' ಎಂದು ಕೇಳಿತು.

'ನಿಮ್ಮಿಂದ ಅಷ್ಟು ದೂರ ಹಾರಲು ಸಾಧ್ಯವೇ?'

ಆ ಪ್ರಶ್ನೆಗೆ ಉತ್ತರಿಸಲಾರದೇ ಯೋಚಿಸಿತು ಹುಂಜ.

ಹೇಂಟೆ ಹೇಳಿತು 'ನಡೆಯುವಷ್ಟು ನಡೆದು ಹಾರುವಷ್ಟು ಹಾರಿದರಾಯಿತು.'

'ಮರಿಗಳಿಂದ ಸಾಧ್ಯವೇ?' ಎಂದಿತು ಟರ್ನ್ ಹಕ್ಕಿ.

'ಹಾಗಾದರೆ ಏನು ಮಾಡೋಣ?'

ಹುಂಜನ ಪ್ರಶ್ನೆಗೆ ಉತ್ತರಿಸಿತು ಹೇಂಟೆ 'ಇಲ್ಲೇ ಗೂಡೊಳಗೆ ಮೈ ಮುದುಡಿ ಕುಳಿತು ಕೊಳ್ಳುವುದು ವಿನಾ ಬೇರೆ ದಾರಿಯಿಲ್ಲ. ಬಿಡು, ನಮಗೇಕೆ ಆ ಯೋಚನೆ.?'

ಹುಂಜ ಸ್ವಲ್ಪ ಹೊತ್ತು ಅತ್ತಿತ್ತ ತಲೆಯಾಡಿಸಿ ಯೋಚಿಸಿ ಯಾವ ಉಪಾಯವೂ ತೋರದೆ ಸುಮ್ಮನಾಯಿತು.

ಮರುದಿನ ಬಾನಕ್ಕಿಗಳು ಎಲ್ಲೆಲ್ಲಿಂದಲೋ ಬಂದು ಸೇರಿದ ನಂತರ ಒಟ್ಟಾಗಿ ಭರ್‍ರನೆ ಹಾರಿ ಹೋದುವು. ಅವು ಒಟ್ಟಾಗಿ ಸೇರಿ ಹಾರಿ ಹೋದ ಬಗೆಯನ್ನು ನೋಡಿ ಕೋಳಿಗಳಿಗೆ ಒಡಲಲ್ಲಿ ಸಂಕಟ. ನಾವೂ ಹಾರಿ ಹೋಗುವಂತಿದ್ದರೆ ಹಿಮಗಾಳಿಯಿಂದ ತಪ್ಪಿಸಿಕೊಳ್ಳಬಹುದಿತ್ತು. ಈ ಚಳಿಯ ಕೊರೆತ ಸಹಿಸಿಕೊಳ್ಳುವುದು ಕಷ್ಟ... ಎಂದೆಲ್ಲಾ ಕೊರಗಿದುವು. ಹುಂಜ ರೆಕ್ಕೆ ಬಡಿದು ಮರದ ರೆಂಬೆಯ ಮೇಲೆ ಹಾರಿ ಕುಳಿತು 'ಕೊ ಕ್ಕೋ ಕೋ!' ಎಂದು ಕೂಗಿತು. ಅದು ಅಷ್ಟು ಎತ್ತರ ಹಾರಿ ಠೀವಿಯಿಂದ ಕೂಗಿದುದನ್ನು

ನೋಡಿ ಹೇಂಟೆಗೆ ಹೆಮ್ಮೆ. ನೀನು ದಿನವೂ ಹೀಗೆಯೇ ಅಷ್ಟಿಷ್ಟು ಹಾರಿ ಅಭ್ಯಾಸ ಮಾಡಿಕೊಂಡರೆ ಹೇಗೆ?'

ಹೇಂಟೆಯ ಪ್ರಶ್ನೆಗೆ ಹುಂಜ ತಲೆಯಾಡಿಸುತ್ತ 'ಖಂಡಿತ ಸಾಧ್ಯ. ಕೊ ಕ್ಕೋ ಕೋ!' ಎಂದಿತು.

ಚಳಿಗಾಲ ಕಳೆಯುವವರೆಗೂ ಕೋಳಿಗಳು ಗೂಡಿನಿಂದ ಹೊರ ಬರಲಿಲ್ಲ.

ಯಜಮಾನಿ ಗೂಡಿಗೆ ಆಹಾರ ತಂದು ಕೊಡುವಾಗಲೆಲ್ಲಾ ಒಂದೊಂದು ಕೋಳಿಯನ್ನೂ ಎಲ್ಲಾ ಮೊಟ್ಟೆಗಳನ್ನೂ ಕೊಂಡೊಯ್ಯುತ್ತಾಳೆ. ಅದೇನೂ ಕೆಟ್ಟದ್ದೆನಿಸಲಿಲ್ಲ ಕೋಳಿಗಳಿಗೆ. ಅವಳು ನೀಡುವ ಆಹಾರ ಪುಷ್ಟಿಕರ. ತಮಗೆ ಆಹಾರ ಹುಡುಕಿಕೊಂಡು ಹೊರಹೋಗುವ ತೊಂದರೆಯೂ ಇರಲಿಲ್ಲ. ಅಂದಮೇಲೆ ಎಲ್ಲಿಯ ಕೊರತೆ? ಇಡೀ ಚಳಿಗಾಲವನ್ನು ಗೂಡಿನಲ್ಲಿಯೇ ಕಳೆದುವು ಕೋಳಿಗಳು.

ಅಂತೂ, ಚಳಿಗಾಲ ಕಳೆಯಿತು. ಕೋಳಿಗಳು ಹೊರ ಹೊರಟಾಗಲೇ ಬಾನಕ್ಕಿಗಳು ಮಧ್ಯಾಹ್ನದ ಹೊತ್ತಿನಲ್ಲಿ ಭರ್‍ರನೆ ಹಿಂದಿರುಗಿ ಬರುತ್ತಿದ್ದುದು ಕಂಡು ಬಂತು.

ಕೋಳಿಗಳು ಕೊರಳೆತ್ತಿ ನೋಡುತ್ತಲೇ ಇವೆ. ಆ ಹಕ್ಕಿಗಳ ಹೆಮ್ಮೆ, ಹಾರಾಟದ ಮೋಜು ಸಂತೋಷದ ರಾಗ ಇವುಗಳನ್ನು ನೋಡಿದರೆ ನಮಗಿಲ್ಲವಲ್ಲಾ ಇಂತಹ ಸುಖ ಎಂಬ ಕೊರಗು.

ಹಿಂದು ಹಿಂಡಾಗಿ ಬಂದ ಹಕ್ಕಿಗಳು ಮರಗಳ ಮೇಲೆ ಕುಳಿತು ಚಿಲಿಪಿಲಿ ರಾಗ ಹಾಡಿದುವು. ಅವುಗಳ ಆನಂದವೇ ಆನಂದ.

'ಏನೈ ಕಾಮಳ್ಳಿ? ಹೇಗಿತ್ತು ಪ್ರವಾಸ? ಕೇಳಿತು ಹುಂಜ.

'ಓ ತುಂಬ ಚೆನ್ನಾಗಿತ್ತು!'

'ಆ ನಾಡಿನಲ್ಲಿ ಚಳಿಗಾಳಿ ಇರಲಿಲ್ಲವೇ?'

'ಇಲ್ಲಿಗಿಂತ ತುಂಬಾ ಕಡಿಮೆಯಿತ್ತು. ಚಳಿಗಾಳಿಯಾಗಲೀ ಹಿಮಪಾತವಾಗಲೀ ಇಲ್ಲವೇ ಇಲ್ಲ.'

'ದವಸ ಧಾನ್ಯ ಸಿಗುತಿತ್ತೆ?'

'ಹೌದು....ಸಿಗುತಿತ್ತು. ಚಳಿಗಾಲದ ಹಣ್ಣುಗಳಿಗೂ ಕೊರತೆ ಇರಲಿಲ್ಲ.'

'ಹೇಗಿದೆ ಆ ನಾಡು?'

'ಓ! ತುಂಬಾ ಚೆನ್ನಾಗಿದೆ. ಬೆಟ್ಟ ಗುಡ್ಡಗಳ ಪ್ರದೇಶ. ಹೊಳೆ ಕೆರೆ ಸಮುದ್ರಗಳಿಗೂ ಕೊರತೆಯಿಲ್ಲ. ಇಲ್ಲಿಯಂತೆ ಹಿಮಪಾತವಿಲ್ಲ. ಅದೇ ವಿಶೇಷ ಸುದ್ದಿ!'

'ಅಂದಮೇಲೆ ಬಹಳ ಆರಾಮವಾಗಿತ್ತು ಅನ್ನಿ!'

'ಹೌದು....ಹೌದು!'

'ಇತ್ತು, ಕೋಳಿಗಳೇ! ನಿಮಗೆ ಎಲ್ಲಿದ್ದರೂ ರಕ್ಷಣೆಯಿಲ್ಲ; ಅದೇ ನಿಮ್ಮ ಕಷ್ಟ.'

'ನಮಗೂ ರಕ್ಷಣೆಯಿದೆ! ಇಲ್ಲ ಎನ್ನಬೇಡ!! ಒಳ್ಳೆಯ ಗೂಡು, ನೀರು, ಧಾನ್ಯಎಲ್ಲವೂ ಇವೆ. ಬೆಕ್ಕು-ನಾಯಿ ನಮ್ಮನ್ನು ಹಿಡಿಯಲಾರವು!' ಹೆಮ್ಮೆಯ ದನಿಯಲ್ಲಿ ಹೇಳಿಕೊಂಡಿತು ಹುಂಜ.

'ಓಹೋಹೋ! ನೀನು ತಿಳಿದದ್ದು ಇಷ್ಟೇ! ನಿಮಗೆಲ್ಲಿದೆ

ರಕ್ಷಣೆ? ಗೂಡುಮಾಡಿ ನಿಮಗೆ ಕಾಳು ನೀಡುವುದು ಜನರ ಹೊಟ್ಟೆ ತುಂಬುವುದಕ್ಕಾಗಿ! ಅಷ್ಟೂ ತಿಳಿಯದೇ! ಕೇಕೆ ಹಾಕಿತು ಟರ್ನ್.

'ಅಂದರೆ...?'

'ಮನುಷ್ಯರು ದಿನಕ್ಕೊಂದು ಕೋಳಿಯನ್ನು ಕೊಯ್ದು ಸಾರು ಮಾಡುತ್ತಾರೆ...! ಹಾಂ ದಿನ ದಿನವೂ ನಿಮ್ಮ ಸಂಖ್ಯೆ ಕಡಿಮೆಯಾಗುತ್ತಿರುವುದು ತಿಳಿಯದೆ?'

'ಹಾಗೇನೂ....?' ಎಂದ ಹುಂಜ ಪುನಃ ಹೇಳಿತು, 'ಯಜಮಾನಿ ಒಂದೊಂದು ಒಯ್ಯುತಿದ್ದರೂ ಮತ್ತೆ ನಾಲ್ಕಾರು ಮರಿಗಳನ್ನು ತಂದು ಬಿಡುತ್ತಿರುತ್ತಾಳೆ!'

'ನೀನೊಂದು ಪೆದ್ದು!' ಕಾಮಳ್ಳಿ ಕೀಂ ಕೀಂ ಕೀಂ ಎನ್ನುತ್ತ ನಕ್ಕುಬಿಟ್ಟಿತು.

ಹುಂಜ ಮಾತಾಡದೆ ಕೊರ್ ಕೊರ್ ಎನ್ನುತ್ತ ಹೇಳಿತು 'ಯಜಮಾನಿ ಒಳ್ಳೆಯವಳು ಒಳ್ಳೆಯ ತಿಂಡಿ ಕೊಡುತ್ತಾಳೆ.'

ಆ ಮಾತು ಕೇಳಿ ಕಾಮಳ್ಳಿಗೆ ಚಕ್ಕಳ ಗುಳ್ಳಿ ಇಟ್ಟಷ್ಟು ನಗು.

'ಏ ಪೆದ್ದಮ್ಮಾ! ಏಕೆ ನಿಮ್ಮನ್ನು ಚೆನ್ನಾಗಿ ಕಾಪಾಡಿಕೊಳ್ಳುತ್ತಾಳೆ ಯಜಮಾನಿ ಗೊತ್ತೇ?'

ಹುಂಜ-ಹೇಂಟೆ ಎರಡೂ ಮಿಕಿ ಮಿಕಿ ನೋಡಿದುವು.

'ಸಾರಿಗಾಗಿ! ಸಾರಿಗಾಗಿ? ಕೀಂ ಕೀಂ ಕೀಂ' ಎಂದು ಹೀಯಾಳಿಸಿತು ಕಾಮಳ್ಳಿ.

ಆ ಮಾತು ಏನೇನೂ ಅರ್ಥವಾಗಲಿಲ್ಲ ಕೋಳಿಗಳಿಗೆ. ಅವು

ಹೊಕ್ ಕೊಕ್ ಎನ್ನುತ್ತ ಕಾಳು ಹೆಕ್ಕತೊಡಗಿದುವು. ಚೀಂ ಚೀಂ ಪೀಂ ಪೀಂ ಮರಿಗಳು ಸುತ್ತಮುತ್ತ ನೆರೆದುವು.

★ ★ ★

ಡಕ್‌ಹಾಕ್ ಹಕ್ಕಿ ರೊಯ್ಯನೆ ಹಾರಿ ಬಂದು ಮರದಮೇಲೆ ಕುಳಿತುಕೊಂಡಿತು. ನಾಡಿಗೆ ಹಿಂದಿರುಗಿ ಬಂದ ಸಂತಸವುಕ್ಕಿ ಕೊಂಬೆಯಿಂದ ಕೊಂಬೆಗೆ ಹಾರಿ ಕೊರಳದನಿ ಹರಿಸಿತು.

ಕೆಳಗಡೆಯಿದ್ದ ಹುಂಜ ಮತ್ತು ಹೇಂಟೆ ಕತ್ತೆತ್ತಿ ನೋಡುತ್ತ ಕೇಳಿದುವು 'ನಿನ್ನ ಕಾಲ ಹೇಗೆ ಕಳೆಯಿತು ಅಲ್ಲಿ?'

'ಬಹಳ ಚೆನ್ನಾಗಿ ಕಳೆಯಿತು. ತುಂಬಾ ಚೆನ್ನಾದ ಹವಾಮಾನ.'

'ಮತ್ತೆ, ನೀವು ಅಲ್ಲೇ ಇರಬಹುದಾಗಿತ್ತಲ್ಲ?'

'ನಮ್ಮ ನಾಡನ್ನು ಬಿಡುವುದುಂಟೇ?'

'ಅದು ಸರಿ....ಅದು ಸರಿ. ಅಂದ ಹಾಗೆ, ಆ ದೇಶಗಳು ತುಂಬಾ ದೂರವೇ?'

'ಹೌದು. ಸಮುದ್ರವನ್ನು ದಾಟಿ ಹೋಗ ಬೇಕು.'

'ಮುಂದಿನ ಚಳಿಗಾಲದಲ್ಲೂ ನೀವೆಲ್ಲಾ ಪುನಃ ಹೋಗಲಿದ್ದೀರಿ?''

'ಹೌದು, ಹೌದು.'

'ನಾವು ಹಾರಬಲ್ಲೆವಾಗಿದ್ದಿದ್ದರೆ, ನಾವೂ ನಿಮ್ಮೊಂದಿಗೆ ಪಯಣಿಸಬಹುದಾಗಿತ್ತು.'

ಡಕ್ ಹಾಕ್ ಯೋಚಿಸಿ ಹೇಳಿತು 'ನಿಮಗೆ ಎರಡು ಬಗೆಯ ತೊಂದರೆ...ನೀವು ದೂರ ಹಾರಲಾರಿರಿ. ಜನ ನಿಮ್ಮನ್ನು ಕಂಡಲ್ಲಿ

ಬಿಡುವುದಿಲ್ಲ. ಈ ಕಷ್ಟಗಳುಂಟು.

'ಪಕ್ಷಿಗಳನ್ನು ಜನ ಕೊಲ್ಲುವುದಿಲ್ಲವೇ?'

'ನಾವು ಹಾರಿ ತಪ್ಪಿಸಿಕೊಳ್ಳಬಲ್ಲೆವು. ಅಲ್ಲದೆ ಪಕ್ಷಿಗಳನ್ನು ಕೊಲ್ಲಬಾರದೆಂಬ ಕಟ್ಟು ಕಟ್ಟಳೆಯೂ ಉಂಟು.'

'ನಾವು ಪಕ್ಷಿಗಳಲ್ಲವೇ? ನಮಗೇಕೆ ಅಂತಹ ರಕ್ಷಣೆಯಿಲ್ಲ?'

'ಜನ ಪಕ್ಷಪಾತಿಗಳು. ಸ್ವಾರ್ಥಿಗಳು ಎಲ್ಲಾ ತಮ್ಮ ನೇರಕ್ಕೆ ನಿರ್ಣಯ'

'ಇದಕ್ಕೇನಾದರೂ ಪರಿಹಾರವುಂಟೇ ಅಣ್ಣಾ? ನೀನು ದೇಶ ಸಂಚಾರಿ ನಿನಗೆ ತಿಳಿದಷ್ಟು ನಮಗೆ ತಿಳಿಯದು.'

'ಪರಿಹಾರ ದೇವರಿಂದ ಆಗಬೇಕು?'

★ ★ ★

ಅಂದು ಕೋಳಿಗಳ ಸಭೆ. ಹಿರಿಯ ಹುಂಜ ಅಧ್ಯಕ್ಷತೆ ವಹಿಸಿ ಭಾಷಣ ಮಾಡುತ್ತ 'ಎಲ್ಲಾ ಕೋಳಿಗಳೂ ಹಕ್ಕಿಗಳಂತೆ ಹಾರುವುದನ್ನು ಕಲಿಯಬೇಕು.' ಎಂದು ಸಾರಿ ಸಾರಿ ಹೇಳಿತು. ಆಗ ಅಲ್ಲಿದ್ದ ಕೋಳಿಗಳೆಲ್ಲಾ ಹಾರಲು ಪ್ರಯತ್ನಿಸಿ ವಿಫಲವಾದುವು. ಮರಿಗಳು ಚೀಂ ಪೀಂ ಎನ್ನುತ್ತ ನಕ್ಕುವು.

'ಕೊ ಕ್ಕೊ ಕೋ! ಅದೇನೂ ವಿಶೇಷವಲ್ಲ ದಿನವೂ ಪ್ರಯತ್ನಿಸಿ ಕಲಿತರಾಯಿತು' ಎಂದಿತು ಹುಂಜ.

ಅದೇ ಸಮಯಕ್ಕೆ ಇನ್ನೂ ಎಷ್ಟೋ ಹಕ್ಕಿಗಳು ಭರ್ರನೆ ಹಾರಿ ಬಂದುವು ಮರಗಳ ತುಂಬೆಲ್ಲಾ ಬಗೆ ಬಗೆಯ ಬಣ್ಣ ಬಣ್ಣದ ಹಕ್ಕಿಗಳೇ.

ಕೋಳಿ ಹುಂಜ ಎತ್ತರದ ದನಿಯಲ್ಲಿ ಕೇಳಿತು 'ಬಾನಕ್ಕಿಗಳೇ! ನೀವು ನಿರಾಯಾಸದಿಂದ ಬಂದಿರಲ್ಲವೇ?'

ಬರ್ನ್ ಹಕ್ಕಿ ಉತ್ತರಿಸಿತು 'ಹೌದು....ನೀವು ನಮ್ಮೊಂದಿಗೆ ಬರುವಂತಿದ್ದರೆ ಸ್ವರ್ಗ ಸೌಖ್ಯ ಸಿಗುತಿತ್ತು.'

'ಹೌದಾ?'

'ನೀವು ನತದೃಷ್ಟ ಕೋಳಿಗಳು!'

'ನಾವು ಈಗಿನಿಂದಲೇ ಹಾರುವುದನ್ನು ಕಲಿಯಲಿದ್ದೇವೆ.'

'ಭೇಷ್! ಭೇಷ್! ನಿಮಗೆ ರೆಕ್ಕೆ ಪುಕ್ಕ ಎಲ್ಲಾ ಇವೆ. ಪ್ರಯತ್ನ ಬೇಕು ಅಷ್ಟೆ'

'ಖಂಡಿತ....!'

'ಅಲ್ಲಿ ತುಂಬ ಅನುಕೂಲಕರವಾದ ಚಳಿಗಾಲ. ಅಹಹ! ಹವೆ ಎಂತಾದ್ದು! ಹಣ್ಣುಗಳೇನು? ಗಿಡಮರಗಳೇನು? ನೀವು ಕಣ್ಣಿಂದ ನೋಡಿ ತಿಳಿಯಬೇಕು.'

'ಇನ್ನೂ ಏನೇನು ವಿಶೇಷ ಹೇಳಿರಲ್ಲ.'

'ಸೊಪ್ಪು ತಿನ್ನುವ ಜನರೇನು? ಬಡಿದಾಡುವ ಗಮ್ಮತ್ತೇನು? ಕರಿಯ ಗೂಳಿಯಂತಹ ಮೈಯೇನು? ಬಣ್ಣ ಬಣ್ಣದ ವಸ್ತುಗಳೇನು? ಇನ್ನೂ ಎಷ್ಟಾದರೂ ಹೇಳಬಹುದು.'

'ಆ ಜನ ಹಕ್ಕಿಗಳನ್ನು ಕೊಲ್ಲುವುದಿಲ್ಲವೇ?'

'ಓಹೋ! ಹಕ್ಕಿ, ಬೆಕ್ಕು, ಹಂದಿ, ಒಂಟೆ, ಹುಲಿ, ಕರಡಿ, ಎಲ್ಲವೂ ಆಹಾರವೇ!'

'ಅಲ್ಲಿ ಅಭಯಾರಣ್ಯಗಳಿಲ್ಲವೇ?

‘ಇವೆ. ರೀತಿ ನೀತಿಗಳನ್ನು ಬದಿಗೊತ್ತುವವರಿದ್ದಾರೆ.’

‘ಅಂದರೆ....?’

‘ಕ್ರೂರಿಗಳು! ಕ್ರೂರಿಗಳು!’

‘ದೇವರೇ ಗತಿ!’

‘ಅಲ್ಲಿದ್ದರೂ ಎಲ್ಲಿದ್ದರೂ ಮೂಕ ಪ್ರಾಣಿಗಳಿಗೆ ದೇವರೇಗತಿ!’

ಕೋಳಿ ಹುಂಜ ತಲೆ ಎತ್ತಿ ಕೊಕ್ ಕೊಕ್ ಎಂದಿತು.

ಹದವರಿತ ಮಿತವ್ಯಯ
ಅಮಿತಾದಾಯಕೆ ದಾರಿ

ಕಿಂಗ್ ಡೇವಿಡ್

ಪಶ್ಚಿಮದೇಶಗಳ ಪೂರ್ವಪ್ರಾಂತ್ಯ ಬಹಳ ಫಲವತ್ತಾದ ಮತ್ತು ಸತ್ ಸಮೃದ್ಧವಾದ ನಾಡು. ಮೇಲಾಗಿ ಬೇಕಾದಷ್ಟು ಖನಿಜ ಸಂಪತ್ತು ತುಂಬಿದ ಅತ್ಯಂತ ಶ್ರೀಮಂತರಾಷ್ಟ್ರ.

ಅಲ್ಲಿಯ ರಾಜನಿಗೆ ಮಕ್ಕಳಿರಲಿಲ್ಲ. ಅನಾಥಾಶ್ರಮದಿಂದ ಒಂದು ಪುಟ್ಟಿ ಹುಡುಗಿಯನ್ನು ದತ್ತು ಮಗಳನ್ನಾಗಿ ಪಡೆದುಕೊಂಡ. ಅವಳ ಹೆಸರು ಜಾನೀಲೇನ್, ಅವಳಿಗೆ ತಂದೆತಾಯಿಯರ ನೆನಪು ಅಷ್ಟಾಗಿ ಇರಲಿಲ್ಲ. ಅವಳಿಗೊಬ್ಬ ಹಿರಿಯಕ್ಕ ಇದ್ದಾಳೆಂದು ಅವರಿವರು ಹೇಳುತ್ತಿದ್ದುದು ಗೊತ್ತು. ಆದರೆ ಎಲ್ಲಿದ್ದಾಳೋ ಅದರ ಸುಳಿವು ಹತ್ತಿರಲಿಲ್ಲ.

ಅನಾಥಾಶ್ರಮದಿಂದ ಅರಮನೆಗೆ ಬಂದಳು ಹುಡುಗಿ.

ಅರಮನೆಯ ಮಹಾ ವೈಭವ ಅವಳನ್ನು ಬೆರಗುಗೊಳಿಸಿತು. ಅರಮನೆಯನ್ನೆಲ್ಲಾ ಸುತ್ತಾಡುವ ಆಸೆ. ಆದರೆ ಎಲ್ಲಿಹೋಗಿ ಎಲ್ಲಿ ಹಿಂದಿರುಗಬೇಕೋ ಅದು ತಿಳಿಯುತ್ತಿರಲಿಲ್ಲ. ಆದ್ದರಿಂದ ಕಳೆದುಹೋದೇನೆಂಬ ಭಯದಿಂದ ಹುಡುಗಿ ದಾದಿಯನ್ನು ಬಿಟ್ಟು ಕದಲುತ್ತಿರಲಿಲ್ಲ.

ರಾಜರಾಣಿಯರೊಂದಿಗೆ ಸ್ವಲ್ಪಹೊತ್ತು ಕಳೆಯುತಿದ್ದಳು

ಸಂಜೆ ಹೊತ್ತಿನಲ್ಲಿ. ಆ ಸುಯೋಗ ಸ್ವಲ್ಪ ಹೊತ್ತು ಮಾತ್ರ. ಉಳಿದ ಹೊತ್ತು ಕಳೆಯುವುದು ದಾದಿಯೊಂದಿಗೆ. ಆಕೆ ದಯಾವಂತೆ.

ಅರಮನೆಯ ಮಗ್ಗುಲಲ್ಲೇ ಒಂದು ಶಾಲೆ. ಅಲ್ಲಿಗೆ ದಾಖಲಾದಳು ಹುಡುಗಿ.

ಶಾಲೆಯ ಉಪಾಧ್ಯಾಯನಿ ಹೇಳಿದಳು,

''ಸಧ್ಯದಲ್ಲೇ ನಮ್ಮ ದೊರೆ ಯುದ್ಧಕ್ಕೆ ಹೊರಡುತ್ತಾನೆ. ಅವನಿಗೆ ಇಡೀ ಪೂರ್ವ ಪ್ರಾತ್ಯಕ್ಕೇ ರಾಜನಾಗುವ ಆಸೆ ತುಂಬಾ ಇದೆ.''

''ಯುದ್ಧದಲ್ಲಿ ಸೋಲಾದರೆ?'' ಕೇಳಿದಳು ಜಾನಿಲೌನ್.

''ಸೋಲಾದರೆ ಕಷ್ಟ. ಗೆದ್ದವರು ನಮ್ಮ ರಾಜ್ಯವನ್ನು ಧ್ವಂಸ ಮಾಡುತ್ತಾರೆ. ಆಗ ಜನಧನ ರಾಜ್ಯ ಎಲ್ಲವೂ ನಷ್ಟವಾಗುತ್ತವೆ. ನಾವು ಬುದುಕಿ ಉಳಿದಿದ್ದರೆ ಎಲ್ಲಾದರೂ ಊರು ಬಿಟ್ಟು ಹೋಗಿ ಬದುಕಿನ ದಾರಿಯನ್ನು ಕಂಡುಕೊಳ್ಳಬೇಕು. ಅದು ತುಂಬಾ ಕಷ್ಟ.''

''ಹಾಗಾದರೆ, ಅಂತಹ ಯುದ್ಧದ ಬಂಗವನ್ನು ಏಕೆ ಕೈಕೊಳ್ಳಬೇಕು?

''ರಾಷ್ಟ್ರದಾಹ. ಇಡೀ ಪ್ರಾಂತ್ಯವೇ ನಮ್ಮದಾಗಬೇಕೆಂಬ ದುರಾಸೆ''.

''ಏಕೆ ಹಾಗೆ?'' ತನ್ನಲ್ಲೇ ಯೋಚಿಸಿದಳು ಜಾನಿಲೌನ್. ಕಷ್ಟನಷ್ಟವನ್ನು ಅರಿತರಿತು ಈ ದುಷ್ಟಚಟಕ್ಕೆ ಏಕೆ ಸಿಕ್ಕಿಕೊಳ್ಳುತ್ತಾನೆ ನಮ್ಮ ಪ್ರಭು? ಅರಮನೆಯನ್ನು ಒಡೆದು ಹಾಕಿದರೆ ರಾಜರಾಣಿಯರ ಗತಿಯೇನು? ಇದುವರೆಗೆ ಸುಖವಾಗಿದ್ದವರು

ಇಂಥ ಕಷ್ಟಕ್ಕೆ ಏಕೆ ಸಿಕ್ಕಿಕೊಳ್ಳುತ್ತಾರೆ?

ಹುಡುಗಿ ತೀರಾ ಯೋಚನೆಗೆ ಒಳಗಾದಳು. ಪಾಠ ಪ್ರವಚನಗಳಲ್ಲಿ ಮನಸ್ಸನ್ನು ತೊಡಗಿಸಲಾಗಲಿಲ್ಲ. ಅನಾಥಾಶ್ರಮದಲ್ಲಿದ್ದಾಗಲೂ ಇಂತಹ ಚಿಂತೆ ಮೂಡಿರಲಿಲ್ಲ.

★ ★ ★

ದಾದಿಯೆಂದಳು ''ಏಕೆ ಚಿಂತಿಸುತ್ತಿ ಮಗುವೆ? ನಮ್ಮ ದೊರೆ ಹಾಗೆ ಯುದ್ಧಕ್ಕೆ ಪರಪ್ರಾಂತ್ಯಗಳಿಗೆ ಯುದ್ಧಕ್ಕೆ ಹೋದಾಗ, ನಿನ್ನ ಸೌಭಾಗ್ಯವಶಾತ್ ನಿನ್ನ ಅಕ್ಕ ದೊರಕಿದರೂ ದೊರಕಬಹುದು.

ಆದರೆ, ಆದೂರವಾಣಿ ಎಳೆಯ ಮನಕ್ಕೆ ಸಾಂತ್ವನ ನೀಡಲಿಲ್ಲ. ಹುಡುಗಿ ಕಂಗಾಲಾದಳು. ಚರ್ಚಿಗೆ ಹೋದಾಗಲೆಲ್ಲಾ ಏಸು ಸ್ವಾಮಿಗೆ ಪ್ರಾರ್ಥಿಸುತಿದ್ದುದು ಅದೇ.

''ಸ್ವಾಮಿಯೇ ಈ ಯುದ್ಧಕಾಂಡವನ್ನು ತಪ್ಪಿಸು''.

ಯುದ್ಧದ ಸಲುವಾಗಿ ಕಾರ್ಖಾನೆಗಳಲ್ಲಿ ಶಸ್ತ್ರಾಸ್ತ್ರಗಳು ತಯಾರಾಗುತಿದ್ದುವು ಎಡೆಬಿಡದೆ. ಆ ಕಾರ್ಖಾನೆಗಳ ನೌಕರರು ಶಸ್ತ್ರಗಳು ತಯಾರಾಗುತಿದ್ದ ಬಗೆಯನ್ನು ಬಣ್ಣಿಸುತ್ತ ಮಾತಾಡುತಿದ್ದರೆ. ಇವಳಿಗೆ ಮೈ 'ಜುಂ' ಎನ್ನುತಿತ್ತು. ಮನಸ್ಸು ಮುದುಡುತಿತ್ತು. ಹುಡುಗಿ ಭಯ ವಿಹ್ವಲಳಾಗುತಿದ್ದಳು. ಮೈ ನವಿರು ನಿಮಿರುತಿದ್ದುವು ಚಳಿ ಹಿಡಿದಂತೆ.

ಸಾಯಂಸಮಯದಲ್ಲಿ ಬಾಲಕಿಯನ್ನು ದೊರೆ ಕರೆಸಿಕೊಂಡ.

ಜಾನಿಲೇನ್ ದೊರೆಯ ಪಕ್ಕದಲ್ಲಿ ಕುಳಿತುಕೊಂಡಳು.

ದೊರೆ ಕೇಳಿದ ''ನಿನ್ನ ಪಾಠಪ್ರವಚನಗಳು ಹೇಗೆ

ನಡೆಯುತ್ತಿವೆ? ನೀನು ಹೇಗೆ ಕಲಿಯುತಿದ್ದಿ?

ಆಗ ಹುಡುಗಿಗೆ ಏನು ಹೇಳಬೇಕೋ ತೋರಲಿಲ್ಲ. ಮನಸ್ಸೆಲ್ಲಾ ಮುಜುಗರ, ಎದೆಯಲ್ಲಿ ಯಾವುದೋ ಕಂಡರಿಯದ ದುಃಖ-ಸಂಕಟ.

ಅವನು ಮತ್ತೆ ಕೇಳಿದ ''ಏಕೆ ಹೀಗಿದ್ದೀ? ಏಕೆ ಮಾತಾಡಲೊಲ್ಲೆ?''

ಅವನು ಮತ್ತೆ ಕೇಳಿದ ''ಏಕೆ ಹೀಗಿದ್ದೀ? ಏಕೆ ಮಾತಾಡಲೊಲ್ಲೆ?''

ಅವಳು ಸಂಕಟಭರಿತ ಧ್ವನಿಯಲ್ಲಿ ನುಡಿದಳು,

''ಅಂಕಲ್, ಶಾಲೆಯಲ್ಲಿ ಎಲ್ಲರೂ ಸಧ್ಯದ ಯುದ್ಧ ವಿಷಯವನ್ನೇ ಮಾತಾಡುತ್ತಿರುತ್ತಾರೆ. ಆ ಯುದ್ಧ ವಿಚಾರವನ್ನು ಕೇಳುತಿದ್ದರೆ ನನಗೆ ತುಂಬಾ ಭಯವಾಗುತ್ತೆ.''

''ಏಕೆ?''

''ಯಾವತ್ತೂ ಯುದ್ಧ ಸಂಭವಿಸಬಾರದು. ಸುಖ ಸಂತೋಷಗಳಿದ್ದರೆ ಎಲ್ಲರಿಗೂ ಸುಖಾನಂದವಲ್ಲವೇ?''

''ಹೌದು...ಹಾಗೆಂದು ಕೈಕಟ್ಟಿಕುಳಿತರೆ ನಾವು ಹೇಡಿಗಳಾಗುತ್ತೇವೆ.''

''ನಿಮಗೆ ಈಗಿರುವ ರಾಜ್ಯ ಸಾಲದೇ? ಮತ್ತೇಕೆ ರಾಜ್ಯದ ವಿಸ್ತರಣೆ?''

''ನಿನಗಿದೆಲ್ಲಾ ಗೊತ್ತಾಗುವುದಿಲ್ಲ ಸುಮ್ಮನಿರು.''

ದೊರೆ ಹಾಗೆಂದುದರಿಂದ ಮುಂದೆ ಮಾತಾಡಲಾಗಲಿಲ್ಲ,

ಜಾನಿಲೇನಳಿಗೆ.

★ ★ ★

ಮತ್ತೆ ಕೆಲವು ದಿನಗಳು ಉರುಳಿದುವು. ಶಾಲೆಯಲ್ಲಿ ಅದೇ ಬಿಸಿ ಬಿಸಿ ಸುದ್ದಿ. ಶಸ್ತ್ರಾಗಾರದಲ್ಲಿ ಕೆಲಸ ಮಾಡುವ ಕೆಲಸಗಾರರು ಮನೆಯಲ್ಲಿ ಬಣ್ಣಿಸುತ್ತಿರುವ ವಿಷಯವನ್ನು ತಿಳಿದುಕೊಂಡ ಮಕ್ಕಳು ಯುದ್ಧಾಸ್ತ್ರಗಳನ್ನು ಬಣ್ಣಿಸುತಿದ್ದರೆ ಜೀವ ಕೊರಳನ್ನು ಒತ್ತುವಷ್ಟು ಒತ್ತಡ ಎದೆಯಲ್ಲಿ ಹುಡುಗಿ ಹೆದರಿ ನೊಂದು ತತ್ತರಿಸಿ ಹೋದಳು. ಹೃದಯ ಕುಂಡ ಭಾರವಾಯಿತು.

ಅಂದು ಸಂಜೆ ರಾಜರಾಣಿಯರ ಭೇಟಿಗೆ ಹೋದಾಗಲೂ ಅದೇ ಮಾತುಕತೆ ನಡೆಯುತಿತ್ತು. ರಾಜ ಅಟ್ಟಹಾಸದಿಂದ ಅಂದ ಜಾರ್ಜ್ ಮೈಕೇಲನ ಚಕ್ರಾಧಿಪತ್ಯವನ್ನು ಮೂರೇ ದಿನಗಳಲ್ಲಿ ಪುಡಿ ಹಾರಿಸದಿದ್ದರೆ ನಾನು ಕಿಂಗ್ ಡೇವಿಡ್ ಅಲ್ಲ!''

ರಾಣಿ, ಆನಂದದಿಂದ ಕೇಕೆ ಹಾಕಿ ನಕ್ಕಳು. ನವಿಲಿನ ಕೇಕಾರವದಂತಿತ್ತು ಅವಳ ನಗೆಯ ಧ್ವನಿ.

ಜಾನಿಲೇನ್ ಮಿದುಮಾತಿನಿಂದ ಕೇಳಿದಳು ''ನಾನೊಂದು ಪ್ರಶ್ನೆ ಕೇಳಬಹುದೇ?''

''ಕೇಳು.....ನಿನಗೇನು ಬೇಕು?''

''ಅಂಕಲ್ ನನಗೇನೂ ಬೇಕಿಲ್ಲ. ಖಂಡಿತ ನಿಮ್ಮಲ್ಲಿ ಕೇಳಿಕೊಳ್ಳುವುದೊಂದಿದೆ....ನೀವು ಅಪ್ಪಣೆ ಕೊಟ್ಟರೆ...''

''ಆಗಬಹುದು ಕೇಳಿಕೋ''

''ಯುದ್ಧವೆಂದರೆ ಎರಡೂ ಕಡೆಗೆ ದುಃಖ-ಸಂಕಟಗಳು

ಸಲ್ಲುತ್ತದೆ. ಸುಖವನ್ನು ಬಯಸಿ ಬಯಸಿ ದುಃಖವನ್ನು ಪಡೆದುಕೊಳ್ಳುವುದಾದೀತೇನೋ ಎಂಬ ಭಯ-ಕಳವಳ- ಆತಂಕ ಮನಸ್ಸಿಗೆ''.

''ನಾವು ಎಲ್ಲಕ್ಕೂ ಸಿದ್ಧರಾಗಿಯೇ ಯುದ್ಧ ಹೂಡುವುದು!''

ಹಾಗೆಂದು ರಾಜ ಫಕಫಕನೆ ನಕ್ಕುಬಿಟ್ಟ.

''ಅಂಕಲ್! ನಿಮಗೆ ಸಾಕಷ್ಟು ಸುಖ ಸಂಪತ್ತಿದೆ. ಮತ್ತೇಕೆ ತಣ್ಣಗಿರಬಾರದು? ನಿಮ್ಮ ಜೀವಕ್ಕೆ ಎಷ್ಟು ಬೇಕೋ ಅಷ್ಟಕ್ಕಿಂತ ಹೆಚ್ಚಿಗೆ ಖಂಡಿತ ಏನನ್ನೂ ನೀವು ಅನುಭವಿಸಲಾರಿರಿ. ರಾಜ್ಯಕೋಶ-ಸುಖಸಂಪತ್ತು ಯಾವುದೂ ನಮ್ಮೊಂದಿಗೆ ಬರುವುದಿಲ್ಲ. ಕೊನೆಯಲ್ಲಿ ನಮಗೆ ಬೇಕಾದುದು ಆರಡಿ ಜಾಗ ಮಾತ್ರ ಆದಕ್ಕಾಗಿ ಏಕೆ ಸಂಕಟವನ್ನು ಬರಮಾಡಿಕೊಳ್ಳಬೇಕು? ಇದು ನಮಗೆ ಮಾತ್ರವಲ್ಲ ತುಂಬಾ ಜನರಿಗೆ ಅಹಿತವಲ್ಲದೆ?

ಸಣ್ಣ ಹುಡುಗಿಯ ದೊಡ್ಡ ಮಾತು ಮನದಾಳಕ್ಕೆ ಇಳಿಯಿತು.

ರಾಜ ಮಾತಾಡಲಿಲ್ಲ.

★ ★ ★

ಜಾನಿಲೇನಳ ಅಕ್ಕ ಮೇರಿ ಲೇನ್ ಅನಾಥಾಶ್ರಮದ ಮದರ್ ಸುಫೀರಿಯರ್ ಆಫೀಸಿನಲ್ಲಿ ತಲೆ ಹಾಕಿ ತನ್ನ ಪರಿಚಯ ಹೇಳಿಕೊಂಡಳು.

''ನಾನು ಜಾರ್ಜ್ ಮೈಕೇಲನ ರಾಜ್ಯದಲ್ಲಿ ಇದುವರೆಗೆ ಇದ್ದೆ. ಅಲ್ಲಿಯ . ಯುದ್ಧ ಸಿದ್ಧತೆಯನ್ನು ನೋಡಿದರೆ ಎದೆ ಒಡೆಯುವಂತಿದೆ. ಅಲ್ಲಿಯ ಯುದ್ಧದ ತಯಾರಿ ಅಗಾಧ. ನಾನು

ಹೆದರಿ ಕಂಗಾಲಾಗಿ ಅಲ್ಲಿಂದ ಹೊರಟುಬಿಟ್ಟೆ. ಇಲ್ಲಿನ ರಾಜರು ಖಂಡಿತ ಅವರನ್ನು ಎದುರಿಸಿ ಗೆಲ್ಲಲಾರರು ಅವರು ಈ ರಾಜ್ಯವನ್ನು ಧ್ವಂಸ ಮಾಡುವ ಸಿದ್ಧತೆಯಲ್ಲಿದ್ದಾರೆ. ಮುಂದೆ ಎಲ್ಲರೂ ಬಹಳ ನಷ್ಟಕ್ಕೆ ಸಿಕ್ಕುತ್ತೇವೆ.''

''ಹಾಗಾದರೆ ಮುಂದೆ ಗತಿ?''

ದೊರೆಯನ್ನು ಯುದ್ಧದ ಕಣದಿಂದ ಹಿಂದೆಳೆಯುವುದು.''

''ಅದು ಸಾಧ್ಯವೇ?''

''ಬೇಹುಗಾರರನ್ನು ಕಳಿಸಿ ಅಲ್ಲಿನ ಸ್ಥಿತಿಗತಿಯನ್ನು ಮೊದಲು ಅರಿತುಕೊಳ್ಳಲು ತಿಳಿಸುವುದು.''

ಸರಿ, ಆ ಕೂಡಲೇ ಅರಮನೆಗೆ ಹೋಗಿ ದೊರೆಯನ್ನು ಕಂಡು ಬರೋಣವೆಂದು ಇಬ್ಬರೂ ಅಲ್ಲಿಂದ ಹೊರಟರು. ಅರಮನೆಯನ್ನು ತಲುಪಿದರು. ತಂಗಿ ಜಾನಿಲೇನಳನ್ನು ನೋಡುತ್ತಲೂ ಅಕ್ಕನಿಗಾದ ಸಂತಸ ಅಷ್ಟಿಷ್ಟಲ್ಲ ಆತ್ಮೀಯ ಆಲಿಂಗನ ನೀಡಿ ನುಡಿದಳು ಅವಳು,

''ಜಾರ್ಜ್ ಮೈಕೇಲನ ಸಾಮ್ರಾಜ್ಯದಲ್ಲಿ ಇದುವರೆಗೆ ನಾವು ಸುಖವಾಗಿದ್ದೆವು. ಮುಂದೆ ಯುದ್ಧಸಿದ್ಧತೆ ಬಲವಾಗಿರುವುದರಿಂದ ಕ್ಷಣಕ್ಷಣವೂ ಯುದ್ಧ ಭಯದಿಂದ ನರಳುವುದಾಗಿದೆ. ಇಂದು ತುಂಬಾ ಕಷ್ಟದ ಪರಿಸ್ಥಿತಿ.''

ಇಬ್ಬರೂ ದೊರೆಯ ಬಳಿಗೆ ಹೋಗಿ ಸದ್ಯದ ಪರಿಸ್ಥಿತಿಯನ್ನು ವಿವರಿಸಿದರು.

ದೊರೆ ಚಿಕ್ಕಹುಡುಗಿ ನಮಗೆ ಬೇಕಾದ ಸ್ಥಳ ಆರಡಿ ಮಾತ್ರ

ಎಂದುದು ಮನೋಭಿತ್ತಿಯಲ್ಲಿ ಸುಳಿದಳಿಯಿತು.

ಜಾನಿಲೇನಳನ್ನು ಮುದ್ದಿಸಿ ಅಂದ,

"ಸಣ್ಣ ಹುಡುಗಿ ನನಗೆ ಸರಿಯಾದ ತಿಳಿವಳಿಕೆ ನೀಡಿದ್ದಾಳೆ."

ಏನು ಎಂಬಂತೆ ಇಬ್ಬರೂ ಅವನೆಡೆಗೆ ನೋಡಿದರು.

"ಕೊನೆಯಲ್ಲಿ ನಮಗೆ ಬೇಕಾದ ಭೂಮಿ ಆರು ಅಡಿಮಾತ್ರ ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾಳೆ."

"ಭೇಷ್!"

ಅನಂತರ ರಾಜನ ಯುದ್ಧದ ಗೀಳು ಕುಸಿದು ಬಿದ್ದಿತು. ಹುಡುಗಿ ತೀರಾ ಮುದ್ದಿನ ಮಗಳಾಗಿ ದೊರೆಯ ಬಳಿಯಲ್ಲಿ ಸುಖವಾಗಿ ಬಾಳಿದಳು.

ಮೋತಿ-ರಾಮಿ

ಒಂದು ದೂರದೇಶದಲ್ಲಿ ಭೀಮಣ್ಣ ಎಂಬ ವ್ಯಕ್ತಿ ಇದ್ದು ಅವನಿಗೆ ಭಾರತ ದೇಶಕ್ಕೆ ಬರುವ ಇಚ್ಛೆ ಮೂಡಿತು. ಅವನಲ್ಲಿ ಎರಡು ಒಂಟೆಗಳಿದ್ದುವು. ಒಂದರ ಹೆಸರು ಮೋತಿ, ಇನ್ನೊಂದರ ಹೆಸರು ರಾಮಿ.

ಭೀಮಣ್ಣನಿಗೆ ಒಂಟೆಗಳನ್ನು ಮಾರುವುದಾಗಲೀ ಅಲ್ಲಿಯೇ ಬಿಟ್ಟು ಬರುವುದಾಗಲೀ ಇಷ್ಟವಾಗಲಿಲ್ಲ. ತನ್ನೊಂದಿಗೆ ಆ ಒಂಟೆಗಳಿಗೂ ಹಡಗಿನಲ್ಲಿ ಸ್ಥಳ ಪಡೆದುಕೊಂಡು, ತಾನೂ ಹಡಗು ಹತ್ತಿದ.

ಪಯಣ ಸಾಗಿತು ಒಂಟೆಗಳು ಆಗಾಗ ನೀರಿನಲ್ಲಿ ನಮ್ಮ ಬಡಕಲು ರೂಪವನ್ನು ಕಣ್ತುಂಬ ನೋಡಿಕೊಳ್ಳುತಿದ್ದುವು.

ಅವುಗಳಿಗೆ ದುಃಖ ತಮಗೊಂದು ಒಳ್ಳೆಯ ರೂಪವಿಲ್ಲ: ಅಂದ ಚಂದವೂ ಇಲ್ಲ, ವಿದ್ಯೆ ಬುದ್ಧಿಯೂ ಇಲ್ಲ...ಏಕೆ ಹೀಗೆ ಸೃಷ್ಟಿಸಿದ ಬ್ರಹ್ಮ ಎಂಬದು ಬಗೆಹರಿಸಲಾರದ ಚಿಂತೆ. ಸರಿಪಡಿಸಲಾರದ ಬದುಕು.

ಮೋತಿ ಹೇಳಿತು ''ಬಿಡು ನಾವು ಯಾವುದೋ ಜನ್ಮದಲ್ಲಿ ತಪ್ಪುಮಾಡಿದ್ದೆವು ಎನ್ನಿಸುತ್ತೆ.''

ನಾವು ಒಂಟೆಗಳು ಏನು ತಪ್ಪು ಮಾಡಲು ಸಾಧ್ಯ? ನಾವು ದೀನಾತಿದೀನರು ಮುಗ್ಧ ಜೀವಿಗಳು. ಎಲ್ಲರೂ ನಮ್ಮನ್ನು ಹೊಡೆದು ಬಡಿದು ಹಿಂಸಿಸುತ್ತಾರೆಯೇ ಹೊರತು ನಾವು ಯಾರಿಗೂ ಏನೂ ಮಾಡಲಾರೆವು. ಅಂದ ಮೇಲೆ ಎಲ್ಲಿಯ ತಪ್ಪು? ಎಲ್ಲಿಯ ದುಷ್ಕರ್ಮ?''

ದೇವರಿಗೆ ಕರುಣೆಯಿಲ್ಲ ಕಷ್ಟಜೀವಿಗಳಿಗೆ ಮತ್ತೂ ಮತ್ತೂ ಕಷ್ಟಕೊಡುತ್ತಾನೆ. ನಮ್ಮ ಕೆಲಸದ ಭಾರವನ್ನು ನಿರ್ವಹಿಸುವಷ್ಟಾದರೂ ನಮಗೆ ಶಕ್ತಿ ಕೊಡಬಾರದೆ...? ಯಜಮಾನ ಹೊರೆ ಹೊರಿಸುವಾಗ ನನ್ನ ಕಾಲುಗಳು ಬಳುಕುತ್ತವೆ. ಮೈದಳ್ಳುತ್ತದೆ....'' ಎಂದು ಕಣ್ಣೀರಿಟ್ಟಿತು ರಾಮಿ.

''ನಿನಗೆ ಮಾತ್ರವಲ್ಲ ನನಗೂ ಕೂಡ ಕಷ್ಟವೇ ಯಜಮಾನನಿಗೂ ನಮ್ಮ ಮೇಲೆ ಕರುಣೆಯಿಲ್ಲ ಹೀಗಾಗಿ ನಮಗೆ ಬಾಳುದ್ದಕ್ಕೂ ಕಷ್ಟವೇ ಆಗಿದೆ...''

''ನಮ್ಮ ಮುಂದೆಯೇ 'ನೀನು ಒಂಟೆ' ಎಂದು ಬೈದಾಡಿಕೊಳ್ಳುತ್ತಾರೆ ಜನ ನಮ್ಮಿಂದ ಕಠಿಣವಾದ ಕೆಲಸ ಮಾಡಿಸಿಕೊಂಡು ನಮ್ಮನ್ನು ಹೀನಾಯವಾಗಿ ಕಾಣುತ್ತಾರೆ ಈ ಕೆಟ್ಟ ಜನ. ಜನರ ಸಂಘ ಎಂದರೆ ಭೀತಿಭಾವ ಹುಟ್ಟುತ್ತೆ ನನಗೆ ಎಲ್ಲಾದರೂ ಕಾಡಿನಲ್ಲಿ ವಾಸಮಾಡುವ ಯೋಚನೆ ಇದೆ. ಏನು ಮಾಡೋಣ ಹೇಳು?''

''ಕಾಡಿಗೆ ಹೋದರೆ ಹುಲಿ ಚಿರತೆಗಳು ನಮ್ಮನ್ನು ಬಿಡುತ್ತವೆಯೇ?''

ಆ ಮಾತಿಗೆ ಯೋಚನೆಗೊಳಗಾಯಿತು ಮೋತಿ.

★ ★ ★

ಹಡಗಿನ ಪಯಣ ಮುಗಿಯಿತು. ಒಂಟೆಗಳು ಭೂಮಿಗೆ ಬಂದಿಳಿದುವು ಯಜಮಾನ ಎರಡೂ ಒಂಟೆಗಳ ಕೊರಳ ಹಗ್ಗ ಹಿಡಿದು ಮುನ್ನಡೆದ.

ಹಡಗಿನಲ್ಲಿ ಕೊಟ್ಟ ಆಹಾರ ಸಾಕಾಗಿರಲಿಲ್ಲ. ಒಂಟೆಗಳಿಗೆ ವಿಪರೀತ ಹಸಿವು ಏನಾದರೂ ತಿನ್ನೋಣವೆಂಬ ಆತುರ-ಕಾತರ ಆದರೆ ಆ ಯಜಮಾನ ಬಿಡಬೇಕಲ್ಲ.....ಎಳೆದುಕೊಂಡೇ ಹೋಗುತಿದ್ದಾನೆ. ಹಗ್ಗದ ಬಿಗಿತದಿಂದ ಕೊರಳು ನೋಯುತ್ತಿವೆ. ಮೋತಿ ಸಂಕಟದಿಂದ ನುಡಿಯಿತು "ನೋಡು, ಯಜಮಾನ ಎಷ್ಟು ನಿಷ್ಕರುಣಿ! ನಮಗೊಂದಿಷ್ಟು ನೀರು ಕುಡಿಯಲೂ ಅವಕಾಶ ನೀಡುತ್ತಿಲ್ಲ. ನನ್ನ ಗಂಟಲು ಒಣಗುತ್ತಿದೆ...."

"ನಾವು ಎಳೆದಾಡಿದರೆ ಯಜಮಾನ ಬಾರಿಸುತ್ತಾನೆ."

"ನಾವು ಬುದ್ಧಿವಂತಿಕೆಯಿಂದ ವರ್ತಿಸಬೇಕು...."

"ಹೇಗೆ, ನಾವು ಏನುಮಾಡಿದರೆ ಸರಿ?"

"ನಾವು ಬಾಯ್ದೆರೆದು ಒಣಗಿದ ಬಾಯನ್ನು ಆತನಿಗೆ ತೋರಿಸಬೇಕು...."

"ಅವನು ಇತ್ತ ತಿರುಗಿದರೆ ತಾನೇ?"

"ಬುದ್ಧಿವಂತಿಕೆಯಿಂದ ವರ್ತಿಸು...." ಪಿಸಿಗುಟ್ಟಿತು ರಾಮಿ.

ಆಗ ಮೋತಿ ಬಾಯ್ದೆರದು 'ಆ ಅಅರಾಯ್' ಎಂದು ಅರಚಿತು.

ಭೀಮಣ್ಣ ತಿರುಗಿ ನೋಡುತ್ತಾನೆ, ಅದರ ಬಾಯಿ ಒಣಗಿ ಜೊಲ್ಲು ಆರಿದೆ. ಪಾಪ, ಮೂಕಪ್ರಾಣಿ ಎಂದುಕೊಂಡ. ಆದರೆ ಅಲ್ಲೆಲ್ಲೂ ನೀರು ಕಾಣಿಸಲಿಲ್ಲ. ಮುಂದೆ ಮುಂದೆ ನಡೆಯುತಿದ್ದಂತೆ ಮತ್ತೆ ಅರಚಿದುವು ಪ್ರಾಣಿಗಳು.

★ ★ ★

ಭೀಮಣ್ಣ ಅಲ್ಲೇ ಹಾದಿ ಬಳಿಯಲ್ಲಿಗ್ದ ಟೀ ಅಂಗಡಿಗೆ ಹೋದ. ಅಂಗಡಿ ಒಡೆಯ ಲೋಟೆಗಳನ್ನು ತೊಳೆಯಲೆಂದು ಬಕೆಟ್ಟುಗಳಲ್ಲಿ ನೀರು ಸಂಗ್ರಹಿಸಿಕೊಂಡಿದ್ದ. ಅವನು ಒಳಹೋಗಿ ಟೀ ಕುಡಿಯುವಷ್ಟರಲ್ಲಿ ಇವು ಆ ನೀರನ್ನು ಹೀರಿ ದಾಹವನ್ನು ಅಡಗಿಸಿಕೊಂಡುವು.

ಭೀಮಣ್ಣ ಹೊರಬಂದು ನೋಡುತ್ತಾನೆ, ಬಕೆಟ್ಟುಗಳು ಖಾಲಿ!

ಅಂಗಡಿಯ ಮಾಲಿಕ ಒಂದೊಂದು ಬಕೆಟ್ಟು ನೀರಿಗೂ ಎರಡೆರಡು ರೂಪಾಯಿ ಕೊಡು ಎಂದು ಆಗ್ರಹಿಸಿದ.

ಒಡನೆಯೇ ಭೀಮಣ್ಣ ಒಂಟೆಗಳ ತಲೆಯನ್ನು ತಟ್ಟಿ ''ಚಿಮು-ಚಿಮು'' ಎಂದ. ಒಂಟೆಗಳು ಆ ಕೂಡಲೇ ಕುಡಿದ ನೀರು ಹಿಂದಿರುಗಿ ಬಕೆಟ್ಟಿಗೆ ಬೀಳುವಂತೆ, ಬುಸ್ಸನೆ ನೀರನ್ನೆಲ್ಲಾ ಉಗುಳಿ ಬಿಟ್ಟುವು! ಆದರೆ ಒಂಟೆಗಳ ಒಡಲಿನ ಮುಸುರೆಯೆಲ್ಲಾ ನೀರಿನೊಡನೆ ಬಂದಿತ್ತು.

ಅಂಗಡಿಯಾತ ''ಈ ಮುಸುರೆ ನೀರು ಯಾರಿಗೆ ಬೇಕು?'' ಎಂದು ಅರಚಿದ. ಆದೇ ಕೂಡಲೇ ಭೀಮಣ್ಣ ''ಹಚಿ ಹಚಿ'' ಎಂದ.

ಒಂಟೆಗಳು ಅದೇ ನೀರನ್ನು ಮತ್ತೆ ಕುಡಿದು ಬಕೆಟ್ಟನ್ನು ಬರಿದು ಮಾಡಿದುವು.

ಅಂಗಡಿಯಾತ ಅವುಗಳ ಬುದ್ಧಿವಂತಿಕೆಯಿಂದ ಸಂತುಷ್ಟನಾದ. ಒಳಗಿನಿಂದ ಇನ್ನೊಂದು ಬಕೆಟ್ಟು ನೀರನ್ನು ತಂದು ಸುರಿಸುರಿದು 'ಬಕೆಟ್ಟನ್ನು ತೊಳಿ' ಎಂದ ಭೀಮಣ್ಣನಿಗೆ.

ಅವನು ತೊಳೆದು ಇನ್ನೊಂದು ಬಕೆಟ್ಟಿಗೆ ಸುರಿಯುತಿದ್ದಂತೆ ಅದನ್ನೂ ಕುಡಿದು ಖಾಲಿ ಮಾಡಿದುವು ಒಂಟೆಗಳು.

ಅವುಗಳ ದಾಹ ಅಡಗಿತು. ಯಜಮಾನನಿಗೆ ಕಾಸು ಉಳಿಯಿತು.

ಜೈ ಜ್ಞಾನಾರ್ಥಿ !

ನಿಚ್ಚಂ ಜಗದ ಸಂಕಟ ತೊಳೆಯೆ
ಸರ್ವಾಂಗೀಣ ಸಹಕಾರ ಬೆಳೆಯೆ
ಸರ್ವೋದಯ ನೇಮದಿಂದೆ-

ಕಡು ಬಡತನ-ಸಿರಿತನ-ಪರತನ
ಜಡಿಕಟ್ಟಿ-ಅಡಿಮೇಲಾಗಿಸೆ, ಸುಜನ
ಸಮತೋಲನ ಭಾವದಿಂದೆ-

ನಿರಕ್ಷರ-ನಿರ್ವೀರ್ಯ-ನಿರಾಸಕ್ತ
ನಿಃಸತ್ವ-ನಿಷ್ಪ್ರಯೋಜನ-ನಿವೃತ್ತಿ
ನಿಸ್ಸಾರಗಳ ನಿರ್ನಾಮದಿಂದೆ-

ಅಂತೇವಾಸಿಗಳ ಸರ್ವೋದ್ಧಾರ !
ಸಂಜೀವನಾ ಪರಮಪಾವನಾ
ಜೈ ಜ್ಞಾನಾರ್ಥಿ ! ಜೈ ಜ್ಞಾನಧನ !

ಲಕ್ಷ್ಮೀ ಪ್ರಕಾಶನ

359, ಕಡಿದಾಳ್ ನಿಲಯ, 14ನೇ ಅಡ್ಡರಸ್ತೆ, ಸದಾಶಿವನಗರ
ಬೆಂಗಳೂರು - 560 080

ಮಲ್ಲಿಕಾ ಕೃತಿಗಳು (ಕಾದಂಬರಿಗಳು)

೧. ಜೀವನಗಂಗಾ
೨. ಡಾ॥ ಅಘೋರ
೩. ಡಾ॥ ಕಮಲೇಶ್
೪. ವಂದೇ ಮಾತರಂ
೫. ಅನಂತಾನಂತದೆಡೆಗೆ
೬. ಮನೋನ್ಮಣಿ
೭. ಸಂತ್ರಾಸಿನಿ
೮. ಆಸೆಯ ಸುಳಿಯಲ್ಲಿ
೯. ಪದ್ಮಾಲಯ
೧೦. ಶ್ರದ್ಧಾಲಯ
೧೧. ಕಮಲಾನಿ ಕಥಾ
(ಕಥಾ ಸಂಕಲನ)
೧೨. ಬಹುರತ್ನವಸುಂಧರಾ
೧೩. ರತ್ನಗರ್ಭಾವಸುಂಧರಾ
೧೪. ಸುಧಾಮಣಿ
೧೫. ರಮಣೀಮಣಿ
೧೬. ಲಿಯೋನಾ
೧೭. ಶ್ರೀಮುಖಿ
೧೮. ಶ್ರೀಹರ್ಷಲಾ
೧೯. ವೈಶಾಖೀಪರ್ವ
೨೦. ಫಾಲ್ಗುಣೀಪರ್ವ
೨೧. ಮಣಿಮೇಖಲಾ
೨೨. ಮಣಿಕರ್ಣಿಕಾ
(ಕವಿತಾ ಸಂಕಲನ)
೨೩. ಪೂಜವಸಾನ ಸಮಯೇ...!
೨೪. ಧ್ಯಾನಾವಸಾನ ಸಮಯೋ..!
೨೫. ಗಗನ ಕುಸುಮ
೨೬. ಜೀವನ ಕುಸುಮ
೨೭. ಚಂಪಕರಾಜಿ
೨೮. ಬಕುಳ ರಾಜಿ
೨೯. ಕಸ್ತೂರಿ ಮಾಲಿಕಾ
೩೦. ಮಂದಾರ ಮಾಲಿಕಾ
೩೧. ವಿಜಯ ಗಾಥಾ
೩೨. ಗಾನ ತೀರ್ಥ
೩೩. ನಾದ ಬಿಂದು
೩೪. ಕಾವ್ಯಾನಂದ ನಂದಿನಿ
೩೫. ಭಾವಾನಂದ ನಂದಿನಿ
೩೬. ಸಂಗೀತ ಪುಷ್ಪಾಂಜಲಿ
೩೭. ಆತ್ಮ ಗೀತಾಂಜಲಿ
(ಸಂಜೀವನ ಕಾವ್ಯ)
೩೮. ಮಂಗಳ ಭಾರತಿ
೩೯. ಕಲ್ಯಾಣ ಭಾರತಿ
೪೦. ಉತ್ತರೋತ್ತರಣಿ
೪೧. ರಾಗಾನುರಾಗಿಣಿ
೪೨. ಪ್ರಫುಲ್ಲ ಭಾರತ
(ಪೌರಾಣಿಕ ನಾಟಕ)
೪೩. ಪುಣ್ಯಾಭಿಸಾರ
೪೪. ಪುಣ್ಯಪಯೋನಿಧಿ
(ಸಾನೆಟ್‌ಗಳು)
೪೫. ತರಂಗಿಣಿ
(ಗದ್ಯಕಾವ್ಯ)
೪೬. ಐಂದ್ರ ಕೀರ್ತಿ ಕೇತನಂ
(ಉಪನಿಷತ್ಕಥಾ)
೪೭. ಕೃತಂ ಸ್ಮರ ಕ್ರತುಂ ಸ್ಮರ
(ಶಿಶು ಸಾಹಿತ್ಯ)
೪೮. ದೂರ ದೇಶದಲ್ಲಿ
೪೯. ಬೆಳದಿಂಗಳ ರಾತ್ರಿ
೫೦. ರಂಗನ ಸಾಹಸ
೫೧. ಓಹಿಯೋಜ ಸರೋವರ
೫೨. ಕೌಶಿಕನ ಗೊಂಬೆ
೫೩. ವಿಶೇಷ ಸುದ್ದಿ
೫೪. ಕಲ್ಯಾಣ ರಾಗಿಣಿ
(ಮಹಾಕಾವ್ಯ)
೫೫. ಶ್ರೀ ವಿವೇಕಾನಂದ ವಿಜಯಂ